ಕರ್ನಾಟಕ ಲಲಿತಕಲಾ ಅಕಾಡೆಮಿ

# ರಘೋತ್ತಮ ಪುಟ್ಟಿ

# Raghothama Putty



ದಿಲೀಪ ಕುಮಾರ ಕಾಳೆ

Dilip Kumar Kale

# ರಘೋತ್ತಮ ಪುಟ್ಟಿ

# Raghothama Putty

ಪೀಟರ್ ಲೂಯಿಸ್
ಪ್ರಧಾನ ಸಂಪಾದಕರು

ದಿಲೀಪ ಕುಮಾರ ಕಾಳೆ
ಲೇಖಕರು

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೧

**Raghothama Putty** - A monograph by Sri Dilip Kumar Kale, Lecturer, Sri Kalanikethana College of Fineart, New Sayyajji Rao Road, Fort Mohalla, Mysore - 570004

© Author

First Edition : 2004

Translated by Sri. B. T. Somaprabhu

Pages : 48 + 8

Price : Rs. 40.00

**ಪೀಟರ್ ಲೂಯಿಸ್**
ಅಧ್ಯಕ್ಷರು / ಪ್ರಧಾನ ಸಂಪಾದಕರು

**ಡಾ|| ಅ. ಲ. ನರಸಿಂಹನ್**
ಮಾಲಿಕೆಯ ಸಂಪಾದಕರು

**ಶ್ರೀ ಬಿ. ಟಿ. ಮುನಿರಾಜಯ್ಯ**
ಪ್ರಕಾಶಕರು / ರಿಜಿಸ್ಟ್ರಾರ್

**ಸಂಪಾದಕ ಮಂಡಳಿ**
ಶ್ರೀ ದಿಲೀಪ ಕುಮಾರ ಕಾಳೆ
ಶ್ರೀ ಬಿ. ಎಸ್. ಕಡೇಮನಿ
ಡಾ. ಪೂರ್ಣಿಮಾ ಪಾಟೀಲ್
ಶ್ರೀ ಸುರೇಶ ಹಾಲಭಾವಿ

**ಶ್ರೀ ಪ. ಸ. ಕುಮಾರ್**
ಪ್ರಕಟಣೆಯ ಸಮನ್ವಯಕಾರರು

**ಮುಖಚಿತ್ರ :** ಶ್ರೀ ರಘೋತ್ತಮ ಪುಟ್ಟಿ ಅವರ 'ಬುದ್ಧ' ಕಲಾಕೃತಿ

**ಮುಖಚಿತ್ರ ವಿನ್ಯಾಸ :** ಶ್ರೀ ಸುಧಾಕರ ದರ್ಜಿ

**ಮುದ್ರಕರು :** ಲಿಪಿ ಮುದ್ರಣ
ಬ್ಯೂಗಲ್ ರಾಕ್ ರಸ್ತೆ
ಬಸವನಗುಡಿ, ಬೆಂಗಳೂರು - 560 004
**ದೂರವಾಣಿ :** 26522061

# ಅಧ್ಯಕ್ಷರ ಮಾತು

ಲಲಿತಕಲಾ ಅಕಾಡೆಮಿಯ ಅಧ್ಯಕ್ಷನಾಗಿ ಮೂರು ವರ್ಷಗಳಾಗುತ್ತಿದೆ. ಈ ಅವಧಿಯಲ್ಲಿ ನಾನು ಮತ್ತು ಸದಸ್ಯರ ತಂಡ ರೂಪಿಸಿ, ನಿರ್ವಹಿಸಿದ ಕಾರ್ಯಕ್ರಮಗಳನ್ನು ನಿಮ್ಮ ಮುಂದಿಡುವುದು ನನ್ನ ಜವಾಬ್ದಾರಿ ಹಾಗೊ ಸಂತೋಷದ ವಿಷಯ. ನಾವು ಮೂರು ವರ್ಷಗಳ ಕಾರ್ಯಕ್ರಮಗಳನ್ನು ರೂಪಿಸುವಾಗ ಯುವ ಪೀಳಿಗೆಗೆ ಸಿಂಹಪಾಲು ನೀಡಿದ್ದೇವೆ, ಹೊಸತನವನ್ನೂ ಕಾಪಾಡಿಕೊಂಡಿದ್ದೇವೆ.

'ಯಂಗ್ ಸ್ಟ್ರೋಕ್ಸ್', 'ನಿಮ್ಮೊಂದಿಗೆ ನಾವು', 'ಮನೆಗೊಂದು ಕಲಾಕೃತಿ', 'ಜನಪದ ಶೃತಿ- ಆಧುನಿಕ ಕೃತಿ', ಯುವಕಲಾವಿದರಿಗೆ ಫೆಲೋಶಿಪ್ ಮುಂತಾದ ನವೀನ ಹಾಗೂ ಉಪಯುಕ್ತ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಕರ್ನಾಟಕವನ್ನು ನಾಲ್ಕು ವಿಭಾಗಗಳಾಗಿ ಮಾಡಿ, ಪ್ರತಿ ಕಾರ್ಯಕ್ರಮದಲ್ಲಿ ನಾಲ್ಕೂ ವಿಭಾಗದ ಕಲಾವಿದರಿಗೆ ಸಮಪಾಲು ದೊರಕುವಂತೆ ಮಾಡಿದ್ದು ಕಲಾವಿದರಿಗೆ ಸಂತಸ ತಂದಿದೆ.

ಈ ಎಲ್ಲಾ ಕಾರ್ಯಕ್ರಮಗಳು ಯುವಶಕ್ತಿಯ ಪಾಲಾದರೆ, ಚಿತ್ರದುರ್ಗದ ಸಾಣೆಹಳ್ಳಿಯಲ್ಲಿ ಹಿರಿಯ ಕಲಾವಿದರ ಶಿಬಿರ, ಬೆಂಗಳೂರಿನಲ್ಲಿ ಕಲಾವಿದೆಯರ ಶಿಬಿರ, ಬೆಂಗಳೂರು ಹಾಗೂ ಗುಲ್ಬರ್ಗಾದಲ್ಲಿ ಗ್ರಾಫಿಕ್ ಶಿಬಿರವನ್ನು ನಡೆಸಿದ್ದೇವೆ. ಶ್ರೀ ಜಿ.ಎಸ್. ದಂಡಾವತಿಮಠ ಹಾಗೂ ಡಾ|| ಎಂ.ವಿ. ಮಿಣಜಿಗಿಯವರ ಶತಮಾನೋತ್ಸವ ಕಾರ್ಯಕ್ರಮಕ್ಕೂ ಪರೋಕ್ಷವಾಗಿ ನಾವು ಕಾರಣಕರ್ತರಾಗಿದ್ದೇವೆ.

ಇದರೊಂದಿಗೆ ವಾರ್ಷಿಕ ಕಲಾಪ್ರದರ್ಶನ, ವಾರ್ಷಿಕ ಪ್ರಶಸ್ತಿ ಸಮಾರಂಭ, ಜಿಲ್ಲಾವಾರು ಕಲಾಶಿಬಿರ, ಏಕವ್ಯಕ್ತಿ ಹಾಗೂ ಸಮೂಹ ಕಲಾಪ್ರದರ್ಶನಗಳಿಗೆ ಧನಸಹಾಯ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮ, ಐಫಾಕ್ಸ್ ಕಲಾಪ್ರದರ್ಶನಗಳಿಗೆ ಸಹಯೋಗ ನೀಡಿದ್ದೇವೆ.

ಹಿರಿಯ ಕಲಾವಿದರಿಗೆ ನೀಡುವ ವಾರ್ಷಿಕ ಪ್ರಶಸ್ತಿಯ ಜೊತೆಗೆ ಕಲಾಕ್ಷೇತ್ರದ ಅಭಿವೃದ್ಧಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಚೇತನಗಳಿಗೆ ವಾರ್ಷಿಕ ಪುರಸ್ಕಾರವನ್ನು ನೀಡಿ ಗೌರವಿಸುವುದನ್ನು ಪ್ರಾರಂಭಿಸಿದ್ದೇವೆ. ಈ ವರ್ಷ ವಾರ್ಷಿಕ ಕಲಾ ಪ್ರದರ್ಶನದಲ್ಲಿ ನೀಡಿದ ಬಹುಮಾನಗಳನ್ನು ಹಿರಿಯ ಕಲಾವಿದರ ಹೆಸರಿನಲ್ಲಿ ನೀಡುವುದರೊಂದಿಗೆ ಅವರನ್ನು ಸ್ಮರಿಸಿದ್ದೇವೆ.

ಇಷ್ಟೆಲ್ಲಾ ಆದರೂ ಮನಸ್ಸಿನಲ್ಲಿ ಕೊರತೆ ಕಾಡುತ್ತಿದೆ. ರಾಷ್ಟ್ರಮಟ್ಟದ ಕಲಾಶಿಬಿರ, ರಾಷ್ಟ್ರಮಟ್ಟದ ವಿಚಾರಗೋಷ್ಠಿ, ಕಲಾಕೃತಿಗಳ ಮಾರಾಟ ಕೇಂದ್ರ, ಹಾಸನದಲ್ಲಿ ರಾಷ್ಟ್ರೀಯ ಕಲಾಗ್ರಾಮ, ವಿಭಿನ್ನ ಶೈಲಿಯ ಭಾವಚಿತ್ರದ ಶಿಬಿರವನ್ನು ಈ ಅವಧಿಯಲ್ಲಿ ನಡೆಸಲಾಗದಿದ್ದುದ್ದಕ್ಕೆ ನಮ್ಮ ಮನಸ್ಸುಗಳಲ್ಲಿ ಇನ್ನೂ ಅತೃಪ್ತಿ ಕಾಡುತ್ತಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಹತ್ತು ಹಲವು ಕಾರ್ಯಕ್ರಮಗಳಲ್ಲಿ ಪುಸ್ತಕ ಪ್ರಕಟಣಾ ಯೋಜನೆಯೂ ಒಂದು. ಅದರ ಅಂಗವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ ***'ಕಲಾವಾರ್ತೆ'*** ಎಂಬ ಸಂಚಿಕೆಯನ್ನು ಅಕಾಡೆಮಿ ನಿಯಮಿತವಾಗಿ ಪ್ರಕಟಿಸುತ್ತ ಬಂದಿದೆ. ಮುದ್ರಣ ಹಾಗೂ ವಿನ್ಯಾಸಗಳಲ್ಲಿ ಕಲಾತ್ಮಕತೆಗೆ ಒತ್ತುಕೊಟ್ಟು, ಕಲಾವಾರ್ತೆಯನ್ನು ವಾರ್ತಾ ಸಂಚಿಕೆಯಾಗಿಸದೆ ಸಂಗ್ರಹಯೋಗ್ಯ ಸಂಚಿಕೆಯನ್ನಾಗಿಸಿದ್ದೇವೆ. ***ಕಲಾವಿದರ ಮಾಲಿಕೆಯಲ್ಲಿ*** ಒಂಬತ್ತು ಜನ ಹಿರಿಯ ಕಲಾವಿದರಾದ

ಕೆ. ಕೇಶವಯ್ಯ, ಎಸ್.ಕಾಳಪ್ಪ, ಎಚ್.ಎಸ್. ಇನಾಮತಿ, ರಘೋತ್ತಮ ಪುಟ್ಟಿ, ವ್ಹಿ.ಟಿ. ಕಾಳೆ, ಪುರುಷೋತ್ತಮ ಕಾರಂತ, ಎಂ.ಆರ್. ಬಾಳೀಕಾಯಿ, ವ್ಹಿ.ಜಿ. ಅಂದಾನಿ ಹಾಗೂ ಸಿ. ಚಂದ್ರಶೇಖರ್ ಅವರುಗಳ ಜೀವನ ಸಾಧನೆಗಳ ಪುಸ್ತಕಗಳು ಸಿದ್ಧಗೊಂಡಿವೆ. ಇವರಲ್ಲಿ ಮೂವರು ಕಲಾವಿದರು ಇಂದು ಇಲ್ಲವಾಗಿದ್ದಾರೆ. ಅವರ ಬಗ್ಗೆ ಮಾಹಿತಿ ಸಂಗ್ರಹಿಸುವುದು ಅತ್ಯಂತ ದುಸ್ತರ ಕಾರ್ಯವಾಗಿದ್ದು ಆಯಾ ಲೇಖಕರು ಈ ಕಾರ್ಯವನ್ನು ಸಾಹಸವೆಂಬಂತೆ ತೆಗೆದುಕೊಂಡು ಬರೆದಿದ್ದಾರೆ. ಉಳಿದ ಲೇಖಕರು ತಮ್ಮ ಲೇಖನದ ಕಲಾವಿದರನ್ನು ಅನೇಕ ಬಾರಿ ಸಂಪರ್ಕಿಸಿ, ಸಂದರ್ಶಿಸಿ ಅಭ್ಯಾಸ ಪೂರ್ಣವಾಗಿ ಬರೆದಿದ್ದಾರೆ. ಈ ಎಲ್ಲ ಬರಹಗಾರರಿಗೆ ಮತ್ತು ಅದನ್ನು ಸಂಪಾದಿಸಿಕೊಟ್ಟ ಡಾ|| ಅ.ಲ. ನರಸಿಂಹನ್ ಅವರಿಗೆ ಅಕಾಡೆಮಿ ಪರವಾಗಿ ಧನ್ಯವಾದಗಳು. ಕರ್ನಾಟಕದ ಎಲ್ಲ ಜಿಲ್ಲೆಗಳ ಸಮಗ್ರ ಚಿತ್ರಕಲೆಯ ಸ್ಥೂಲನೋಟವನ್ನು ಒಂದೆಡೆಗೆ ತರುವ ಉದ್ದೇಶದಿಂದ ***ಕರ್ನಾಟಕ ಚಿತ್ರಕಲಾ ದರ್ಶನ*** ಎಂಬ ಬೃಹತ್ ಸಂಪುಟವನ್ನು ತರುತ್ತಿದ್ದು, ಅದಕ್ಕೆ ಹೆಚ್ಚಿನ ಅನುದಾನಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ***ಜನಪ್ರಿಯ ಕಲಾಮಾಲೆ***ಯ ಅಡಿಯಲ್ಲಿ ಕರ್ನಾಟಕದ ದೇಶಿ ಚಿತ್ರಕಲೆಯನ್ನು ಪ್ರಾದೇಶಿಕ ವೈಶಿಷ್ಟ್ಯತೆಯ ಹಿನ್ನೆಲೆಯಲ್ಲಿ ಪರಿಚಯಿಸುವ ಹತ್ತು ಪುಸ್ತಕಗಳನ್ನು ತಜ್ಞ ವಿದ್ವಾಂಸರಿಂದ ಬರೆಯಿಸಿ ಇದೀಗ ಪ್ರಕಟಿಸುತ್ತಿದ್ದೇವೆ. ಅವುಗಳನ್ನು ಸುಂದರವಾಗಿ ಸಂಪಾದಿಸಿ ಕೊಟ್ಟವರು ಅಕಾಡೆಮಿಯ ಸದಸ್ಯರಾದ ಸಂಶೋಧಕ ಡಾ|| ಎಸ್.ಸಿ. ಪಾಟೀಲರು. ಅವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು. ಅಕಾಡೆಮಿಯ ಇನ್ನೊಂದು ಗ್ರಂಥ ಭಾವಚಿತ್ರ ಪರಂಪರೆಯ ***'ಮುಖಗಳೊಂದಿಗೆ ಮುಖಾಮುಖಿ'*** ಅಧ್ಯಯನ ಯೋಗ್ಯ ಕೃತಿಯನ್ನು ನಮ್ಮ ಮನವಿಯಂತೆ ಬರೆದುಕೊಟ್ಟಿರುವ ವಿಮರ್ಶಕರಾದ ಶ್ರೀ ಕೆ.ವಿ. ಸುಬ್ರಹ್ಮಣ್ಯಂರವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು. ಇದಲ್ಲದೆ ಇಪ್ಪತ್ತು ಹಿರಿಯ-ಕಿರಿಯ ಕಲಾವಿದರ ಕಲಾಕೃತಿಗಳ ಚಿತ್ರಸಂಪುಟವೊಂದು ಅಕಾಡೆಮಿ ಸದಸ್ಯ ಶ್ರೀ ಪ.ಸ. ಕುಮಾರ್ ಅವರ ಸಂಪಾದಕತ್ವದಲ್ಲಿ ಬರುತ್ತಿದೆ.

ನಾವು ಮೂರು ವರ್ಷಗಳಲ್ಲಿ ಮಾಡಿದ ಕಾರ್ಯಕ್ರಮಗಳ ಪಟ್ಟಿಯನ್ನು ವಾರ್ಷಿಕ ವರದಿಯಲ್ಲಿ ನೀಡುತ್ತಿದ್ದೇವೆ. ಎಲ್ಲಾ ಕಾರ್ಯಕ್ರಮಗಳಲ್ಲೂ ನಮ್ಮೊಡನೆ ಸಹಕರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೇಂದ್ರ ಲಲಿತಕಲಾ ಅಕಾಡೆಮಿ, ರೀಜನಲ್ ಸೆಂಟರ್ ಚೆನ್ನೈ, ಐಫಾಕ್ಸ್ ಸಂಸ್ಥೆಗಳಿಗೆ ನಮ್ಮ ವಂದನೆಗಳು.

ನನ್ನೊಡನೆ ಇದುವರೆಗೂ ಸಹಕರಿಸಿ ಉಪಯುಕ್ತ ಸಲಹೆಗಳನ್ನು ನೀಡಿದ ಸದಸ್ಯ ಮಿತ್ರರೆಲ್ಲರಿಗೂ ನನ್ನ ಇಡೀ ತಂಡದ ಪರವಾಗಿ ಹಾಗೂ ವೈಯಕ್ತಿಕವಾಗಿ ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ವಿಶೇಷವಾಗಿ ಸಮನ್ವಯಕಾರರಾಗಿ ಹಲವಾರು ಕಾರ್ಯಕ್ರಮಗಳನ್ನು ಆಗು ಮಾಡಿದ ಸದಸ್ಯ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ಕೃತಜ್ಞತೆಗಳು. ಈ ಎಲ್ಲ ಪ್ರಕಟಣೆಗಳೂ ವಿವಿಧ ಮುದ್ರಣಾಲಯಗಳಲ್ಲಿ ರೂಪತಳೆದಿದ್ದು, ಅವುಗಳ ಮಾಲೀಕರಿಗೆ, ಮುಖಚಿತ್ರವನ್ನು ಕಲಾಕೃತಿಯೆಂಬಂತೆಯೇ ರಚಿಸಿಕೊಟ್ಟ ಶ್ರೀ ಸುಧಾಕರ ದರ್ಬೆ ಅವರಿಗೆ, ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಮತ್ತು ಸಿಬ್ಬಂದಿ ವರ್ಗದ ರಾಜು, ವೆಂಕಟೇಶ್, ಗಂಗಾಧರ, ಮುತ್ತು, ಬಾಲು, ಲೋಕೇಶ ಮತ್ತು ಅರವಿಂದ ಅವರುಗಳಿಗೆ ಹಾಗೂ ಪ್ರತ್ಯಕ್ಷ, ಪರೋಕ್ಷವಾಗಿ ಬೆಂಬಲ ನೀಡಿದ ಮಹನೀಯರಿಗೆಲ್ಲಾ ನಮ್ಮ ಧನ್ಯವಾದಗಳು.

ನಮ್ಮ ಈ ಕಿರು ಪ್ರಯತ್ನಗಳನ್ನು ಕಲಾವಿದರು, ಸಹೃದಯ ಕಲಾಸಕ್ತರು ತುಂಬು ಹೃದಯದಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

***- ಪೀಟರ್ ಲೂಯಿಸ್***

# ಲೇಖಕರ ಮಾತು

ಪುಟ್ಟಯವರ ಕುರಿತು ಅವರ ಬದುಕು ಕೃತಿಗಳನ್ನು ಕುರಿತು ಮಾಹಿತಿ ಸಂಗ್ರಹಿಸಲು, ನಾನು ಅದೇಷ್ಟೋ ಬಾರಿ ಅವರ ಮನೆಗೆ ಹೋಗಿದ್ದೇನೆ. ಈ ಕಲಾವಿದರೊಂದಿಗೆ ಅನೇಕ ವಿಷಯಗಳ ಕುರಿತು ಚರ್ಚಿಸಿದ್ದೇನೆ. ಅವರ ನೆನಪಿನ ಬುತ್ತಿಗಳನ್ನು ಬಿಚ್ಚುವಂತೆ ಒತ್ತಾಯಿಸಿದ್ದೇನೆ. ಕೆಲವು ಸಲ ಹೊತ್ತಿಲ್ಲದ ಹೊತ್ತಿನಲ್ಲಿ ಅವರನ್ನು ಕಾಡಿದ್ದೇನೆ. ಇದ್ಯಾವುದನ್ನು ಅವರು ಲೆಕ್ಕಿಸುತ್ತಿರಲಿಲ್ಲ. ಪ್ರತೀ ಬಾರಿ ನಾನು ಹೋದಾಗಲೂ, ಹೊಸ ಹುರುಪಿನೊಂದಿಗೆ ನಗು ನಗುತ್ತ ಬರಮಾಡಿಕೊಂಡು, ನನ್ನೊಂದಿಗೆ ಸಹಕರಿಸಿದ್ದಾರೆ. ಇವರೊಂದಿಗೆ ನಾನು ಕಳೆದ ಕ್ಷಣಗಳನ್ನೆಲ್ಲ ಮರೆಯಲು ಸಾಧ್ಯವೇ ಇಲ್ಲ! ಹಳೇ ತಲೆಮಾರಿನ ಕಲಾವಿದರಾದರೂ, ಅವರ ವಿಚಾರಗಳು ಮಾತ್ರ ಸಮಕಾಲೀನವಾದದ್ದು ನಮ್ರತೆ, ಮುಗ್ಧತೆ, ಮತ್ತು ಪ್ರಾಮಾಣಿಕತೆಗಳ ಸಂಗಮದಂತಿರುವ ಇವರು, ನಮ್ಮ ನಡುವೆ ಅತೀ ಮಹತ್ವದ ಕಲಾವಿದರಾಗಿ ಕಂಡುಬರುತ್ತಾರೆ.

ಈ ಕಲಾವಿದರ ಬದುಕು ಇಂದಿನ ಪೀಳಿಗೆಗೆ ಆದರ್ಶ ವಾಗುವಂತಹುದು, ಈ ಹಿರಿಯ ಕಲಾವಿದ ಇನ್ನೂ ನೂರಾರು ಶ್ರೇಷ್ಠ ಕಲಾ ಕೃತಿಗಳನ್ನು ಈ ನಾಡಿಗೆ ನೀಡಲಿ ! ಶತಾಯುಷಿ ಯಾಗಲಿ ಎಂದು ಬಯಸುತ್ತೇನೆ. ಇವರ ಜನ್ಮ ಶತಮಾನೋತ್ಸವವನ್ನು ಅಭಿಮಾನಿಗಳೆಲ್ಲ ಏರ್ಪಡಿಸಿ, ಅದರ ಆನಂದವನ್ನು ಪುಟ್ಟಯವರು ಸ್ವತಃ ಕಾಣಲಿ ಎಂದು ನನ್ನ ಹಾರೈಕೆ.

ಇಂತಹ ಒಂದು ಅವಕಾಶ ನೀಡಿದ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರು, ರಿಜಿಸ್ಟ್ರಾರ್, ಎಲ್ಲ ಸದಸ್ಯರುಗಳು ಹಾಗೂ ಪ್ರಕಟಣಾ ಸಮಿತಿಯ ಎಲ್ಲ ಸದಸ್ಯರಿಗೆ ನನ್ನ ಕೃತಜ್ಞತೆಗಳು.

**- ದಿಲೀಪ ಕುಮಾರ ಕಾಳೆ**



ರಘೋತ್ತಮ ಪುಟ್ಟಿ / **Raghothama Putty**

## ದಿಲೀಪಕುಮಾರ ಕಾಳೆ



ಬೆಳಗಾವಿ ಜಿಲ್ಲೆಯ ಮುಳವಳ್ಳಿಯಲ್ಲಿ ಜನಿಸಿದ (೧೯೬೮) ಶ್ರೀ ದಿಲೀಪ ಕುಮಾರ ಕಾಳೆ ಅವರು ಚಿತ್ರ ಕಲೆಯ ಡಿಪ್ಲೊಮಾ ಪದವಿಯಲ್ಲದೆ ಚಿತ್ರಕಲೆಯ ಹಾಗೂ ಕನ್ನಡ ಸಾಹಿತ್ಯದ ಸ್ನಾತಕ ಪದವಿಯನ್ನೂ ಪಡೆದಿದ್ದಾರೆ. ಕೊಲ್ಹಾಪುರ, ಖಾನ್‌ಪುರಗಳೂ ಸೇರಿದಂತೆ ರಾಜ್ಯದ ಹಲವಾರು ಕಡೆಗಳಲ್ಲಿ ಏಕವ್ಯಕ್ತಿ ಪ್ರದರ್ಶನ ಮಾಡಿದ್ದಾರೆ. ದೆಹಲಿ, ಮುಂಬಯಿ, ಕೋಲ್ಕತ, ಚೆನ್ನೈಗಳಲ್ಲದೆ ಕಳೆದ ಹದಿನಾಲ್ಕು ವರ್ಷಗಳಲ್ಲಿ ಸುಮಾರು ಇಪ್ಪತ್ತು ಗುಂಪು ಪ್ರದರ್ಶನಗಳಲ್ಲಿ ಪಾಲುಗೊಂಡಿದ್ದಾರೆ. ಕೇಂದ್ರ, ವಲಯ ಹಾಗೂ ರಾಜ್ಯ ಅಕಾಡಮಿಗಳ ವಾರ್ಷಿಕ ಪ್ರದರ್ಶನಗಳು ಹಾಗೂ ರಾಷ್ಟ್ರಮಟ್ಟದ ಇಪ್ಪತ್ತಾರು ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಜಲ, ತೈಲ ವರ್ಗಗಳ ಕಲಾಶಿಬಿರಗಳಲ್ಲದೆ ಗ್ರಾಫಿಕ್, ಭಿತ್ತಿಚಿತ್ರ, ಛಾಯಚಿತ್ರ ಕುರಿತ ಕಲಾಗಾರಗಳಲ್ಲಿ ಅಭ್ಯರ್ಥಿಯಿಂದ ಹಿಡಿದು ಶಿಬಿರದ ನಿರ್ದೇಶಕರ ವರೆಗೆ ಹಲವಾರು ಸ್ತರಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಶ್ರೀ ಕಾಳೆಯವರು ಚಿಕ್ಕ ವಯಸ್ಸಿನಲ್ಲಿಯೇ ದೊಡ್ಡ ಸಾಧನೆಯನ್ನು ಮಾಡಿದ್ದು ರಾಜ್ಯ ಹಾಗೂ ಕೇಂದ್ರ ಅಕಾಡಮಿಗಳು ಒಗ್ಗೂಡಿ ಏರ್ಪಡಿಸಿದ ಹೊಸ ಸಹಸ್ರಮಾನದ ನೆನಪಿನ ಪ್ರದರ್ಶನದಲ್ಲಿ ಪ್ರಶಸ್ತಿಯಲ್ಲದೆ ದೆಹಲಿಯ ಅಖಿಲ ಭಾರತ ಕಲೆ, ಕರಕುಶಲ ಕಲಾ ಪ್ರದರ್ಶನ, ರಾಜ್ಯ ಲಲಿತಕಲಾ ಅಕಾಡೆಮಿಯ ಕಲಾ ಪ್ರದರ್ಶನದಲ್ಲಿ ಪ್ರಶಸ್ತಿ, ನಾಗಪುರದ ಪ್ರಶಸ್ತಿ ಇತ್ಯಾದಿ ಹಲವಾರು ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಮೈಸೂರು ಅರಮನೆಯ ವಿಶ್ವಸ್ಥ ಮಂಡಳಿಯಲ್ಲಿ ಹಾಗೂ ರಾಜ್ಯ ಲಲಿತಕಲಾ ಅಕಾಡೆಮಿಯ ಸದಸ್ಯತ್ವ ಹೊಂದಿರುವ ಶ್ರೀಯುತರು ಹಲವಾರು ಸಂಘ ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳಲ್ಲಿದ್ದಾರೆ. ಪ್ರಸ್ತುತ ಮೈಸೂರಿನ ಶ್ರೀ ಕಲಾನಿಕೇತನ ಕಲಾ ಶಾಲೆಯಲ್ಲಿ ಅಧ್ಯಾಪಕರಾಗಿದ್ದು ಶ್ರೀ ರಘೋತ್ತಮ ಪುಟ್ಟಿ ಅವರನ್ನು ಹಲವಾರು ಬಾರಿ ಸಂದರ್ಶಿಸಿ ಲಲಿತಕಲಾ ಅಕಾಡಮಿಗಾಗಿ ಪ್ರಸ್ತುತ ಪುಸ್ತಕ ರಚಿಸಿಕೊಟ್ಟಿದ್ದಾರೆ.

# ರಘೋತ್ತಮ ಪುಟ್ಟಿ

''ನಿಮಗೆ ವಯಸ್ಸು ತೊಂಬತ್ತಾದರೂ ಇನ್ನೂ ಚಿತ್ರ ರಚನೆ ಮಾಡಬೇಕೆಂಬ ಉತ್ಸಾಹ ನಿಮ್ಮಲ್ಲಿ ಇದೆಯಲ್ಲವೆ! ಅದಕ್ಕೆ ಕಾರಣ ಕೇಳಬಹುದೇ?'' ಎಂದು ಆ ಹಿರಿಯ ಕಲಾವಿದರನ್ನು ಪ್ರಶ್ನಿಸಿದಾಗ....

''ನನ್ನ ಐವತ್ತೆಂಟನೇ ವಯಸ್ಸಿನ ತನಕ ನಾನು ಕುಂಚವನ್ನು ಸರಿಯಾಗಿ ನನ್ನ ಕೈಯಲ್ಲಿ ಹಿಡಿದಿರಲಿಲ್ಲ ಬಾಲ್ಯದಿಂದಲೂ ಕುಂಚವನ್ನು ಶಾಶ್ವತವಾಗಿ ಹಿಡಿಯಬೇಕೆಂಬ ಆಸೆಗೆ ಅವಕಾಶ ಒದಗಿ ಬಂದಿರಲಿಲ್ಲ. ಅಂತಹ ಸುವರ್ಣಾವಕಾಶ ಒಲಿದು ಬಂದದ್ದು! ನಾನು ಸರ್ಕಾರಿ ಕೆಲಸದಿಂದ ನಿವೃತ್ತನಾದಾಗ. ಆಗ ನನಗೆ ೫೮ ವರ್ಷ ವಯಸ್ಸಾಗಿತ್ತು. ನನ್ನ ಬಾಲ್ಯದ ಮಿತ್ರರು ಕಲಾವಿದರಾಗಿ ಬೆಳೆದದ್ದನ್ನು, ಅವರು ಚಿತ್ರ ಬರೆಯುವುದನ್ನು ಆಗಾಗ ನೋಡುತ್ತಿದ್ದೆ. ಆ ಅವಕಾಶ ನನಗಿಲ್ಲವಲ್ಲ ಎಂದು ಅದೆಷ್ಟೋ ಬಾರಿ ನನ್ನ ಮನದಲ್ಲಿ ನನಗೇ ಗೊತ್ತಾಗದಂತೆ ಗೊಣಗಿದ್ದೆ. ಎಲ್ಲಾ ವಿಧಿನಿಯಮ. ಯಾವುದಷ್ಟೇ ಆದರೂ ಶುಭಗಳಿಗೆ ಎಂಬುದು ಬರಲೇಬೇಕು. ಅದು ನನ್ನ ಬದುಕಲ್ಲಿ ತಡವಾಗಿ ಬಂತು. ನನಗೇನೂ ಬೇಸರವಿಲ್ಲ. ಇಲ್ಲಿಯವರೆಗೆ ಆ ಭಗವಂತ ಜೀವಂತವಾಗಿಟ್ಟಿದ್ದಾನಲ್ಲ ಅದೇ ಸಾಕು.

ಈಗ ಅವಕಾಶವಿದೆ ಚಿತ್ರಿಸುತ್ತಿದ್ದೇನೆ. ಅದರ ಪರಿಣಾಮವಾಗಿ ಮನಸ್ಸಿಗೆ ಆನಂದಾನುಭವ ಪ್ರಾಪ್ತವಾಗಿದೆ. ಇದಕ್ಕಿಂತ ಮಿಗಿಲಾದ ಸುಖವುಂಟೆ? ಜೀವನೋಪಾಯಕ್ಕಾಗಿ ಚಿತ್ರಕಲೆಯನ್ನೇ ಅವಲಂಬಿಸಿದವರಿಗೆ ಚಿತ್ರಕಲೆಯ ಕ್ರಮಬದ್ಧವಾದ ಕಲಾಶಿಕ್ಷಣಬೇಕು. ನಾನು ಅಂಥವನಲ್ಲ, ಕ್ರಮಬದ್ಧವಾದ ಕಲಾಶಿಕ್ಷಣ ಪಡೆಯಲು ಹೋಗಿ ಹತಾಶೆಗೊಂಡು ನಂತರ ನನ್ನ ಮನಸ್ಸಿನ ವಿನೋದಕ್ಕಾಗಿ ಚಿತ್ರ ಮಾಡಿದವನು. ಶ್ರೇಷ್ಠವಾದ ಜನರು ಹೊಗಳುವಂತಹ ಕೃತಿಗಳನ್ನು ರಚಿಸುವ ಸಾಮರ್ಥ್ಯವು ನನ್ನಲ್ಲಿಲ್ಲ.

ಆಗೊಮ್ಮೆ ಈಗೊಮ್ಮೆ ಮನಸ್ಸಿನ ದಾಹ ಇಂಗಿಸಿಕೊಳ್ಳಲು ಚಿತ್ರ ರಚಿಸುತ್ತಿದ್ದೇನೆ. ಅಷ್ಟರಲ್ಲಿಯೇ ನೆಮ್ಮದಿ ಕಾಣುತ್ತಿದ್ದೇನೆ.

ಇದು ತೊಂಬತ್ತರ ಹರೆಯದ ಆ ಕಲಾವಿದನ ಮನದಾಳದಿಂದ ಬಂದ ಸರಳವಾದ, ವಿನಯಶೀಲವಾದ ಉತ್ತರವಾಗಿತ್ತು. ಈ ಉತ್ತರದಲ್ಲಿ ಯಾವುದೇ ಉತ್ಪ್ರೇಕ್ಷೆಯಾಗಲೀ, ಜಂಭವಾಗಲೀ, ಇರಲಿಲ್ಲ. ಇದು ಒಬ್ಬ ನಿಜವಾದ ಕಲಾವಿದನ ಅಂತರಂಗದ ಒಳನುಡಿ.

''ಮನಸ್ಸಿಗೆ ಎಷ್ಟೇ ತಾಪತ್ರಯ, ಕಷ್ಟಗಳು ಇರಲಿ ಆ ಕಷ್ಟಗಳು ಇಂದಿನದ್ದೇ ಆಗಿರಲಿ, ಹಿಂದಿನದೇ ಆಗಿರಲಿ, ಚಿತ್ರರಚಿಸಬೇಕೆಂದು ಮನಸ್ಸು ಮಾಡಿ ಚಿತ್ರರಚನೆಯಲ್ಲಿ ಮಗ್ನರಾದರೆ ಸಾಕು! ನಮ್ಮ ಮನಸ್ಸಿನ ಚಿಂತೆ, ದುಃಖ, ದುಮ್ಮಾನಗಳೆಲ್ಲವೂ ದೂರವಾಗುತ್ತವೆ. ನೀವು ಯಾವುದೇ ಸಂದರ್ಭದಲ್ಲಿ ಒಂದು ಕಡೆ ಸ್ಥಿರವಾಗಿ ಅರ್ಧಗಂಟೆ ನಿಂತುಕೊಳ್ಳುವುದೆಂದರೆ, ಅದು ತುಂಬಾ ಹಿಂಸೆ. ಮಾನಸಿಕವಾಗಿ ದೈಹಿಕವಾಗಿ ದಣಿವಾಗಿ ಬಿಡುತ್ತದೆ. ಆದರೆ ಅದೇ ಮನಸ್ಸು ಚಿತ್ರ ರಚನೆಯಲ್ಲಿ ತೊಡಗಿತೆಂದರೆ ಸಾಕು. ಚಿತ್ರ ಮುಗಿಯುವ ತನಕ ಯಾರೇ ಆಗಿರಲಿ, ಕಡಿಮೆ ಎಂದರೂ ಮೂರ್‍ನಾಲ್ಕು ತಾಸುಗಳಷ್ಟು ನಿಂತುಕೊಂಡಿರಬಹುದು, ದಣಿವೆಂಬುದು ದೇಹಕ್ಕೆ ಗೊತ್ತಾಗುವುದೇ ಇಲ್ಲ.



ಕಮಲ ಮಹಲ್, ಹಂಪೆ / Kamala Mahal, Hampi

''ಚಿತ್ರಗಾರರು ಸುಖಿಗಳು, ಅವರಷ್ಟು ಸಂತೋಷಗಾರರು ಇರುವುದು ಕಡಿಮೆ. ಅವರು ಯಾವತ್ತೂ ಒಬ್ಬಂಟಿಗರಲ್ಲ. ಅವರು ಚಿತ್ರ ರಚಿಸಬೇಕಾದಾಗ ಪ್ರತಿಕ್ಷಣವು ಬೆಳಕು, ಬಣ್ಣ, ಶಾಂತಿ, ಭರವಸೆ ಮುಂತಾದ ಸಂಗತಿಗಳನ್ನು ಪಡೆಯುತ್ತಲೇ ಹೋಗುತ್ತಾರೆ.'' ಎಂಬುದೂ ಅವರ ಅಭಿಪ್ರಾಯವೇ.

ಅದಕ್ಕಾಗಿ ''ಚಿತ್ರಕೃತಿಗಳು ರೋಗ ನಿವಾರಕ ಮತ್ತು ಚಿಕಿತ್ಸಕ'' ಎನ್ನುತ್ತಾರೆ ಡಾ|| ಗ್ರಿಫಿತ್.

ಬಿ. ಪಿ. ಬಾಯರಿಯವರು ತಮ್ಮ ಬರವಣಿಗೆಯ ಒಂದು ಕಡೆ ''ಚಿತ್ರ ರಚನೆಯೆಂಬುದು ಒಂದು ವಿನೋದ, ಬಣ್ಣಗಳು ಕಣ್ಣಿಗೆ ಅಂದ, ಅವುಗಳ ಬಳಕೆಯಿಂದ ಮನಸ್ಸಿಗೆ ಆನಂದ, ಅವುಗಳ ಮಿಶ್ರಣ ಕಾರ್ಯವು ಮೋಹಕ. ಅದು ಒಂದು ಹೊಸ ಪ್ರಪಂಚದ ಅನ್ವೇಷಣೆ. ಬಿಸಿಲು ಮತ್ತು ಬಣ್ಣಗಳಿಂದ ಮಿನುಗುವ ತೋಟ ಹಾಗೂ ಸಾಮಾನ್ಯ ದೃಶ್ಯಗಳು ಚಿತ್ರಗಳಲ್ಲಿ ಮತ್ತಷ್ಟು ಅಂದವಾಗಿ ಕಾಣುತ್ತವೆ. ಸಾಮಾನ್ಯವಾದ ಒಂದು ವಸ್ತು, ದೃಶ್ಯ ಮತ್ತು ಆ ವೇಳೆಯನ್ನು ಶ್ರೀಮಂತಗೊಳಿಸುತ್ತವೆ. ಅದು ಮೈ ಮರೆಯುವಂತಹ ಸಂಶೋಧನೆ; ಮುಗಿಯದ ಮೋಹಕ ಪಯಣ.'' ಈ ಮಾತುಗಳೆಲ್ಲ ಪುಟ್ಟಿಯವರ ಕಲಾ ಜೀವನಕ್ಕೆ ಹೇಳಿದಂತಹ ಮಾತುಗಳು.

ಬಹಳಷ್ಟು ಕಲಾವಿದರಂತೆ ಪುಟ್ಟಿಯವರಿಗೂ ಬಾಲ್ಯದಲ್ಲಿಯೇ ಕಲೆಯ ಬಗ್ಗೆ ಒಲವಿತ್ತು. ತಂದೆ ಬಿ.ವಿ. ಕುಪ್ಪಾಚಾರ್ ಶಿಕ್ಷಣ ಇಲಾಖೆಯಲ್ಲಿದ್ದವರು. ತಾಯಿ ಕಾವೇರಮ್ಮ ಅವರಿಗೆ ರಂಗೋಲೆ ಕಸೂತಿಗಳಲ್ಲಿ ಪರಿಶ್ರಮವಿತ್ತು.

ದಸರಾ, ದೀಪಾವಳಿ ಮುಂತಾದ ಹಬ್ಬಗಳಲ್ಲಿ ವಿವಿಧ ಮಾದರಿಯ ಚಿತ್ರಗಳು, ದೇವರ ಚಿತ್ರಗಳು, ಅಲಂಕಾರಿಕ ನಕ್ಷೆ ಮುಂತಾದವುಗಳನ್ನು ರಚಿಸುತ್ತಿದ್ದರು. ತಾಯಿ ಬಿಡಿಸುತ್ತಿದ್ದ ರಂಗೋಲಿ ಚಿತ್ರಗಳನ್ನು

ಬೆರಗುಗಣ್ಣಿನಿಂದ ನೋಡುತ್ತ ಕೂರುತ್ತಿದ್ದ ಪುಟ್ಟಿಯವರಿಗೆ.... ಅವರ ತಾಯಿಯು ಹಾಳೆಯ ಮೇಲೆ ದೇವರ ಚಿತ್ರಗಳನ್ನು, ವಿವಿಧ ನಮೂನೆಯ ಪ್ರಾಣಿ, ಪಕ್ಷಿಗಳ ಅಲಂಕಾರಿಕ ಚಿತ್ರ ಬರೆಯುವಂತೆ ಪ್ರೇರೆಪಿಸುತ್ತಿದ್ದರು. ಹಾಗೆಯೇ ಕಾವೇರಮ್ಮನವರು ರಂಗೋಲಿಯಲ್ಲಿ ಬರೆದ ಚಿತ್ರಗಳನ್ನು ಪುಟ್ಟಿಯವರು ಹಾಳೆಯ ಮೇಲೆ ಬರೆಯಲು ಪ್ರಯತ್ನಿಸುತ್ತಿದ್ದರು.

ಬೆಂಗಳೂರಿನ ಬಸವನಗುಡಿಯ ಮನೆಯಲ್ಲಿ ಕಾವೇರಮ್ಮನವರು ಕಲೆಯಲ್ಲಿ ಆಸಕ್ತಿ ಇದ್ದವರಿಗೆ ಮಧ್ಯಾಹ್ನದ ಸಮಯದಲ್ಲಿ ಕಸೂತಿ, ರಂಗೋಲಿ, ಮುಂತಾದ ಕಲೆಗಳನ್ನು ಕಲಿಸುತ್ತಿದ್ದರು. ಅದಕ್ಕೆ ಪೂರಕವಾಗಿ ಪುಟ್ಟಿಯವರು ತಾಯಿಯವರ ಕೆಲಸಕ್ಕೆ ನೆರವಾಗುತ್ತ, ಕಸೂತಿಗೆ ಬೇಕಾದ ಮಾದರಿಗಳ ರೇಖಾಚಿತ್ರಗಳನ್ನು ಬರೆದು ಕೊಡುತ್ತ ತಮಗರಿವಿಲ್ಲದೆಯೇ ಕಲಾ ಪ್ರಪಂಚಕ್ಕೆ ಕಾಲಿಟ್ಟಾಗಿತ್ತು. ಇದು ಅವರ ಕಲಾ ಜೀವನದ ಮೊದಲ ಹೆಜ್ಜೆ.

ತಂದೆಯ ಕೆಲಸದ ನಿಮಿತ್ತ ವರ್ಗವಾಗುತ್ತಿದ್ದು ನಾಗಮಂಗಲದಲ್ಲೂ ಕೆಲ ವರ್ಷ ಇದ್ದರು. ಪ್ರಾಯಶಃ ನಾಗಮಂಗಲದ ಶಿಲ್ಪ ಕಲಾವಾತಾವರಣ ಪುಟ್ಟಿಯವರ ಎಳೆವೆಯಲ್ಲಿ ಅವರ ಮೇಲೆ ಪರಿಣಾಮ ಬಿದ್ದಿರಬಹುದು. ನಂತರ ಬೆಂಗಳೂರು, ತುಮಕೂರು, ಶಿವಮೊಗ್ಗಗಳಲ್ಲಿ ಸಾಮಾನ್ಯ ವಿದ್ಯಾಭ್ಯಾಸ ಮುಂದುವರಿಯಿತು. ಅಂತಿಮವಾಗಿ ಬೆಂಗಳೂರಿಗೆ ತಂದೆಯವರಿಗೆ ವರ್ಗವಾಗಿದ್ದು ಹೈಸ್ಕೂಲ್ ವಿದ್ಯಾಭ್ಯಾಸ ಇಲ್ಲಿಯೇ ಆಯಿತು. ಈ ಹಂತದಲ್ಲಿಯೇ ಆಕಸ್ಮಿಕವೆಂಬಂತೆ ಅ.ನ.ಸುಬ್ಬರಾಯರ ಪರಿಚಯವಾಯಿತು. ಆಗ ಕಲಾಮಂದಿರ ಶಾಲೆ ಮೆಜೆಸ್ಟಿಕ್ ಪ್ರದೇಶದಲ್ಲಿತ್ತು. ಒಮ್ಮೆ ಗೆಳೆಯರೊಂದಿಗೆ ಕುತೂಹಲದಿಂದ ಕಲಾ ಶಾಲೆಗೆ ಬಂದರು. ಅಲ್ಲಿನ ವಾತಾವರಣ ಹುಡುಗನ ಮನಸ್ಸನ್ನು ತಟ್ಟಿತು. ಯಾಕೆಂದರೆ ಅಲ್ಲಿ ಚಿತ್ರ ಕಲೆಯನ್ನು ಕಲಿಯುತ್ತಿದ್ದ ವಿದ್ಯಾರ್ಥಿಗಳು ತಮ್ಮ ಪಾಡಿಗೆ ಒಂದೊಂದು ಕಡೆ ಕುಳಿತುಕೊಂಡು ಸಂತೋಷದಿಂದ ಚಿತ್ರ ಅಭ್ಯಾಸ ಮಾಡುತ್ತಿದ್ದರು.

ಒಬ್ಬ ವಿದ್ಯಾರ್ಥಿಯು ತನ್ನ ಎದುರಿಗೆ ಒಬ್ಬ ವ್ಯಕ್ತಿಯನ್ನು ಕೂಡ್ರಿಸಿಕೊಂಡು ಬಿಳಿ ಹಾಳೆಯ (ಡ್ರಾಯಿಂಗ್ ಶೀಟ್) ಮೇಲೆ ಆ ವ್ಯಕ್ತಿಯ ಮುಖ ಹಾಗೂ ಆತನ ದೇಹದ ಚಿತ್ರವನ್ನು ಬರೆಯುವುದರಲ್ಲಿ ತಲ್ಲೀನನಾಗಿದ್ದ. ಅದು ಪುಟ್ಟಿಯವರಿಗೆ ತುಂಬಾ ಇಷ್ಟವಾಗಿ, ಆಸಕ್ತಿಯಿಂದ, ತನ್ನನ್ನೇ ತಾನು ಮೈ ಮರೆತು ಹಾಗೆ ನೋಡುತ್ತಾ ನಿಂತು ಬಿಟ್ಟರು. ಚಿತ್ರವನ್ನು ಕುತೂಹಲದಿಂದ ವೀಕ್ಷಿಸುತ್ತಿದ್ದವನಿಗೆ ಸಮಯ ಕಳೆದದ್ದೇ ಗೊತ್ತಾಗಿರಲಿಲ್ಲ, ಸುಮಾರು ಒಂದು ತಾಸಿನ ನಂತರ ಒಬ್ಬ ವ್ಯಕ್ತಿಯ ಕೈ ಪುಟ್ಟಿಯ ಹೆಗಲ ಮೇಲೆ ಬಿದ್ದಾಗ, ಗಾಬರಿಗೊಂಡು ಭಯದಿಂದ ತಿರುಗಿ ನೋಡಲಾಗಿ, ಆ ವ್ಯಕ್ತಿ ಬೇರೆ ಯಾರೂ ಆಗಿರದೇ ಸ್ವತಃ ಸುಬ್ಬರಾಯರಾಗಿದ್ದರು. ಆ ಚಿತ್ರ ಬರೆಯುತ್ತ ಕುಳಿತಿದ್ದ ವಿದ್ಯಾರ್ಥಿ ಸಿ.ಜೆ. ಪುರುಷೋತ್ತಮ. ಇವರು ನಂತರ ಕಲೆಯಲ್ಲಿ ಸಾಕಷ್ಟು ಹೆಸರು ಗಳಿಸಿದರು. ಕೆ.ಎಸ್. ನರಸಿಂಹಸ್ವಾಮಿ ಅವರ ಮೈಸೂರ ಮಲ್ಲಿಗೆ ಪದ್ಯ ಸಂಕಲನಕ್ಕೆ ಕಲಾಕೃತಿಗಳನ್ನು ರಚಿಸಿದವರು. ನಂತರ ಬೆಂಗಳೂರಿನಿಂದ ಬೊಂಬಾಯಿಗೆ ಹೋಗಿ ನೆಲೆಸಿದರು.

ಪುಟ್ಟಿಯವರು ಅಷ್ಟೊಂದು ಆಸಕ್ತಿಯಿಂದ ಚಿತ್ರ ವೀಕ್ಷಿಸುತ್ತಿದ್ದುದನ್ನು ಗಮನಿಸಿದ ಅ.ನ. ಸುಬ್ಬರಾಯರು ಮಮತೆಯಿಂದ ತಲೆಯನ್ನು ನೇವರಿಸುತ್ತ ''ಮಗೂ... ನಿನ್ನ ಹೆಸರೇನಪ್ಪಾ?

ನೀನೂ... ಚಿತ್ರ ಬರೀತಿಯಾ...'' ಎಂದು ಕೇಳಿದಾಗ, ನಿರೀಕ್ಷಿಸದೇ ಇದ್ದ ಪ್ರಶ್ನೆ ಎದುರಾದದ್ದನ್ನು ಕಂಡು ಸ್ವಲ್ಪ ಗೊಂದಲಗೊಳಗಾಗಿ, ಸಂಕೋಚದಿಂದ ಇಲ್ಲ... ಇಲ್ಲ... ಅಂದರು. ಆದರೂ ಹುಡುಗನ ಆಸಕ್ತಿಯನ್ನು ಗಮನಿಸಿದ್ದ ಸುಬ್ಬರಾಯರು ನೀನು ಯಾವುದಾದರೂ ಚಿತ್ರ ಬರೆದಿದ್ದರೆ ನಾಳೆ ತೆಗೆದುಕೊಂಡು ಬಂದು ನನಗೆ ತೋರಿಸು ಎಂದಾಗ, ಬಾಲಕನಿಗೆ ನಂಬಲಿಕ್ಕಾಗದೇ ಸಂತೋಷದಿಂದ ನೆಗೆದಾಡುತ್ತ ಬಸವನಗುಡಿಯಲ್ಲಿರುವ ತಮ್ಮ ಮನೆಗೆ ಬಂದದ್ದೇ ಗೊತ್ತಾಗಲಿಲ್ಲ.

ರಾತ್ರಿಯಿಡೀ ನಿದ್ದೆ ಮಾಡದೇ ಬೆಳಗಾಗುವುದನ್ನೇ ಕಾಯುತ್ತಿದ್ದು ಬೆಳಗಾದೊಡನೆಯೇ ತಾನು ಈ ಹಿಂದೆ ಬರೆದಿಟ್ಟಿದ್ದ ಚಿತ್ರಗಳನ್ನು ಎತ್ತಿಕೊಂಡು ಬೆಳಿಗ್ಗೆ ಏಳು ಗಂಟೆಗೆ ಕಲಾಮಂದಿರಕ್ಕೆ ಓಡಿ ಬಂದರು. ಪುಟ್ಟಿ ಅವರಿಗಾದ ಸಂತೋಷದಲ್ಲಿ ಬೇಗನೆ ಬಂದು ಬಿಟ್ಟಿದ್ದರು. ಆದರೆ ಕಲಾಮಂದಿರದ ಬಾಗಿಲು ಇನ್ನೂ ತೆರೆದಿರಲಿಲ್ಲ. ಅದು ತೆರೆಯುವುದು 10 ಗಂಟೆಯ ನಂತರ, ಆದರೆ ಉತ್ಸಾಹದಲ್ಲಿದ್ದ ಆ ಬಾಲಕನಿಗೆ ಇದರ ಪರಿವೇ ಇರಲಿಲ್ಲ.

ಬಾಲಕ ಬರೆದಿದ್ದ ಚಿತ್ರಗಳನ್ನು ಸಂತೋಷದಿಂದ ನೋಡಿದ ಸುಬ್ಬರಾಯರು, ಆತನಲ್ಲಿದ್ದ ಕಲಾ ಪ್ರೌಢಿಮೆಯನ್ನು ಖುದ್ದು ಪರಿಶೀಲಿಸುವ ಸಲುವಾಗಿ ಪುಟ್ಟಿಯವರ ಕೈಯಲ್ಲಿ ಒಂದು ಬಿಳಿ ಹಾಳೆಯನ್ನು ನೀಡಿ ಕಮಲದ ಹೂವಿನ ಚಿತ್ರವನ್ನು ಬರೆಯುವಂತೆ ತಿಳಿಸಿದರು. ಹೂವಿನ ಚಿತ್ರವನ್ನು ಶ್ರದ್ಧೆಯಿಂದ ಬರೆದುದನ್ನು ನೋಡಿ ಸಂತೋಷದಿಂದ ಬೆನ್ನು ತಟ್ಟುತ್ತಾ ನಾಳೆನೇ ಬಂದು ಕಲಾಮಂದಿರಕ್ಕೆ ಸೇರಿಕೋ ಎಂದಾಗ... ಬಾಲಕನಿಗೆ ನಂಬಲಾಗಲಿಲ್ಲ, ಮತ್ತೊಮ್ಮೆ ತನ್ನ ಮನದಲ್ಲಿನ ಸಂಶಯವನ್ನು ಸ್ಪಷ್ಟಪಡಿಸುವ ಸಲುವಾಗಿ... ಸುಬ್ಬರಾಯರನ್ನು ಕುರಿತು, ನಿಜವಾಗಿ ನಾಳೆ ಬಂದು ಸೇರಿಕೊಳ್ಳಲೇ ಸಾರ್! ಎಂದಾಗ ಹೌದಪ್ಪ... ನಾಳೇನೆ ಬಂದು ಸೇರಿಕೊ ಎಂದು ಪ್ರೀತಿಯಿಂದ ಹೇಳಿದಾಗ, ಬಾಲಕ ಒಳಗೊಳಗೆ ಕುಣಿದಾಡಿ ಬಿಟ್ಟ. ಅಷ್ಟೇ ಅಲ್ಲ, ಮುಂದೆ ದೊಡ್ಡ ಕಲಾವಿದನಾಗುವ ಕನಸು ಕಂಡ.

ಆದರೆ ವಿಧಿ ಆಟ ಬೇರೆಯಾಗಿತ್ತು. ಈ ಸುದ್ದಿ ಕೇಳಿದ ಪುಟ್ಟಿಯವರ ತಂದೆ ಕುಪ್ಪಾಚಾರ್ ಕಲಾಮಂದಿರಕ್ಕೆ ಸೇರಿಕೊಳ್ಳುವುದು ಬೇಡವೆಂದು, ಇದು ತನಗೆ ಇಷ್ಟವಿಲ್ಲವೆಂದು ತಿಳಿಸಿದರು. ಯಾಕೆಂದರೆ ಪುಟ್ಟಿಯವರ ತಾತ, ಆಗಿನ ಕಾಲದಲ್ಲಿ ಪದವೀಧರರು, ತಂದೆ ಕುಪ್ಪಾಚಾರ್‌ರು ಪದವೀಧರರು. ಹೀಗಾಗಿ ತಮ್ಮ ಮಗ ಪದವೀಧರನಾಗಿ ಉನ್ನತ ಹುದ್ದೆ ಹಿಡಿಯಬೇಕೆಂಬುದು ಅವರ ಆಸೆಯಾಗಿತ್ತು.

ತಂದೆಯವರ ಇಚ್ಛೆಗೆ ತಲೆಬಾಗಲೇ ಬೇಕಿತ್ತು. ಆದರೂ ಹೈಸ್ಕೂಲ್‌ನಲ್ಲಿ ಚಿತ್ರಕಲೆ ಒಂದು ಐಚ್ಛಿಕ ವಿಷಯವಾಗಿ ತೆಗೆದುಕೊಂಡಿದ್ದು ಆ ಮಟ್ಟಿಗಾದರೂ ಕಲಾಭ್ಯಾಸ ನೆರವೇರುತ್ತಿತ್ತು. ಮೆಟ್ರಿಕ್‌ನಲ್ಲಿ ಅನುತ್ತೀರ್ಣನಾದಾಗ ಮದರಾಸ್‌ಗೆ (ಈಗಿನ ಚೆನ್ನೈ) ಹೋಗಿ ಅಲ್ಲಿಯ ಕಲಾಶಾಲೆಯಲ್ಲಿ ಅಭ್ಯಾಸ ಮಾಡಬಯಸಿದರು. ಆದರೆ ಅಲ್ಲಿಯೂ ಅವರ ಆಸೆ ಕೈಗೂಡದೆ ವಸ್ತ್ರತಯಾರಿಕೆಯಲ್ಲಿ ಎರಡು ವರ್ಷ ತರಬೇತಿ ಪಡೆದು ಬಂದರು. ಕೆಲಕಾಲ ಮಧುರಾ ಮಿಲ್ಸ್‌ನಲ್ಲಿ ದುಡಿದರು. ನಂತರ ಖಾಸಗಿ ಕಂಪನಿಯಲ್ಲಿ ಕಲಾವಿದನಾಗಿ, ಸ್ವಂತ ಸ್ಟೂಡಿಯೋ ತೆರೆಯಲು ಪ್ರಯತ್ನಿಸಿ ವಿಫಲರಾಗಿ ಕೊನೆಗೆ ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಗೆ ಸೇರಿದರು.



ಅರಳಗುಪ್ಪೆ ದೇವಾಲಯ / Aralaguppe Temple

ಆಗ ಅವರಿಗೆ ಆಗಲೇ ಇಪ್ಪತ್ತೈದು ವರ್ಷದಾಟಿತ್ತು. ಅಲ್ಲಿ ಇವರ ಜೊತೆ ಸಹಪಾಠಿಗಳಾಗಿ ಎಂ.ಎಸ್.ಚಂದ್ರಶೇಖರ, ಶ್ರೀ ಎಸ್.ಕಾಳಪ್ಪ, ಶ್ರೀ ಸೋಮಸುಂದರ, ಹಾಗೂ ಹಿರಿಯ ತರಗತಿಯಲ್ಲಿ ಎಂ.ಟಿ.ವಿ. ಆಚಾರ್ಯ, ವಿಷ್ಣುದಾಸ್ ರಾಮದಾಸ್ ಮುಂತಾದವರು ಅಲ್ಲಿ ಚಿತ್ರಕಲಾಭ್ಯಾಸ ಮಾಡುತ್ತಿದ್ದರು. ಇವರೆಲ್ಲ ಈಗ ಕರ್ನಾಟಕದಲ್ಲಿ ಸಾಕಷ್ಟು ಖ್ಯಾತಿಗಳಿಸಿದ ಕಲಾವಿದರಾಗಿದ್ದಾರೆ.

ಅಂದು ಸಿ.ಟಿ.ಐ.ನಲ್ಲಿ ಕಲೆಯ ಬಗೆಗೆ ತುಂಬಾ ಒಳ್ಳೆಯ ವಾತಾವರಣವಿತ್ತು, ಕರ್ನಾಟಕದ ಪ್ರಥಮ ಕಲಾಶಾಲೆಯಾದ ಇಲ್ಲಿಂದ ಕಲಾ ಶಿಕ್ಷಣ ಪಡೆದ ಹಲವಾರು ಮಂದಿ ಶ್ರೇಷ್ಠ ಕಲಾವಿದರಾಗಿ ಹೊರ ಹೊಮ್ಮಿದ್ದಾರೆ. ಮತ್ತು ಆಗ ಅಲ್ಲಿ ಕಲಾಶಿಕ್ಷಣ ಬೋಧಿಸುತ್ತಿದ್ದವರು, ಖ್ಯಾತ ಕಲಾವಿದರುಗಳಾದ ಟಂಕಸಾಲೆ, ವೈ. ಸುಬ್ರಹ್ಮಣ್ಯರಾಜು, ಕೃಷ್ಣಯ್ಯ ಮುಂತಾದವರು. ಇಂತಹ ಗುರುಗಳ ಮಾರ್ಗದರ್ಶನದಲ್ಲಿ ಕಲಾಭ್ಯಾಸ ಮಾಡುವ ಅವಕಾಶ ಸಿಕ್ಕಿದ್ದಕ್ಕೆ ಪುಟ್ಟಿಯವರು ಸಾಕಷ್ಟು ಸಂತೋಷ ಪಟ್ಟಿದ್ದರು.

ತುಂಬಾ ಆಸಕ್ತಿಯಿಂದಲೇ ಚಿತ್ರಕಲೆಯನ್ನು ಶ್ರದ್ಧೆ ಇಟ್ಟು ಕಲಿಯುತ್ತಿರಬೇಕಾದರೆ, ಒಂದು ದಿನ ಅವರ ಮಹತ್ವಾಕಾಂಕ್ಷೆಯನ್ನೇ ತಲೆ ಕೆಳಗೆ ಮಾಡಿದಂತಹ ಘಟನೆ ನಡೆದೇ ಬಿಟ್ಟಿತು. ವಿಧಿ ಯಾಟವೆಂದರೆ ಇದೇ... ಅಲ್ಲವೇ! ತರಗತಿಯಲ್ಲಿ ಒಂದು ದಿನ ಪುಟ್ಟಿಯವರ ಹಿರಿಯ ವಿದ್ಯಾರ್ಥಿಗಳು, ವ್ಯಕ್ತಿಯೊಬ್ಬನನ್ನು ತಮ್ಮ ಎದುರಿಗೆ ಕುಳ್ಳಿರಿಸಿಕೊಂಡು, ಆ ವ್ಯಕ್ತಿಯ ಭಾವ ಚಿತ್ರಗಳನ್ನು ರಚಿಸುತ್ತಿದ್ದರು. ಅಲ್ಲಿ ಆ ದೃಶ್ಯವನ್ನು ಕಂಡ ಪುಟ್ಟಿಯವರಿಗೆ, ಆ ವಿಷಯ ವಿಶಿಷ್ಟವೆನಿಸಿತು. ಮತ್ತು ಅವರ ಮನದಲ್ಲಿ ತಾನೂ ಕುಳಿತ ಆ ವ್ಯಕ್ತಿಯ ಚಿತ್ರವನ್ನು ರಚಿಸಬೇಕೆಂದು ಬಯಸಿ, ಹಿರಿಯ ವಿದ್ಯಾರ್ಥಿಗಳಲ್ಲಿ ಕೇಳಿ, ಅವರ ಸಮ್ಮತಿ ಪಡೆದು ಬೋರ್ಡ್ ಮೇಲೆ ಪೇಪರ್ ಅಂಟಿಸಿ ವ್ಯಕ್ತಿ ಚಿತ್ರಣಕ್ಕೆ ಶುರು ಮಾಡೇ ಬಿಟ್ಟರು. ಅಧಿಕೃತವಾಗಿ ಆ ವಿಷಯ ಇವರ ತರಗತಿಗೆ ಇರಲಿಲ್ಲದಿದ್ದರೂ ಮನಸ್ಸಿನ ಆ ತಾಕಲಾಟ ಹೊರಹಾಕಲು, ಮತ್ತು ತುಂಬಾ ದಿನಗಳಿಂದ ಭಾವಚಿತ್ರಣವನ್ನು ಮಾಡಬೇಕೆಂಬ ಮನಸ್ಸಿನಾಸೆಗೆ

ಮಣಿದು ಭಾವಚಿತ್ರ ರಚಿಸಲು ಮುಂದಾಗಿದ್ದರು. ತುಂಬಾ ಆಸಕ್ತಿ ಹಾಗೂ ತನ್ಮಯತೆಯಿಂದ ತನ್ನೆದುರಿಗೆ ಕುಳಿತಿರುವ ಆ ವ್ಯಕ್ತಿಯ ಮುಖದಲ್ಲಿನ ಭಾವ, ಆಕಾರ. ಮುಖದಲ್ಲಿನ ಆ ಅಂಗಗಳ ಮೇಲೆ ಬದಿಯ ಕಿಟಕಿಯ ಮುಖಾಂತರ ಹಾದು ಬಂದ ಆ ಬೆಳಕು, ಹಾಗೂ ಬೆಳಕಿನ ಪ್ರತಿಫಲನವಾಗಿ ಆಚೆ ಬದಿಯಲ್ಲಿ ಕಾಣುವ ನೆರಳು, ಇವುಗಳನ್ನೆಲ್ಲ ಸೂಕ್ಷ್ಮವಾಗಿ ಗ್ರಹಿಸಿ, ತನ್ಮಯನಾಗಿ ಚಿತ್ರಿಸುತ್ತಿದ್ದಾಗ ವೇಳೆ ಕಳೆದದ್ದೇ ಗೊತ್ತಾಗಲಿಲ್ಲ, ಆದಾಗಲೇ ಮಧ್ಯಾಹ್ನದ ಊಟ ಮುಗಿಸಿಕೊಂಡು ಗುರುಗಳಾದ ಶ್ರೀ ಸುಬ್ರಹ್ಮಣ್ಯರಾಜುರವರು ತರಗತಿಗೆ ಬಂದು ಪುಟ್ಟಿಯವರ ಹಿಂದೆ ನಿಂತಿದ್ದರು. ಇದ್ಯಾವುದರ ಪರಿವೇ ಇಲ್ಲದೆಯೇ, ತನ್ನ ಪಾಡಿಗೆ ತಾನು ಕೆಲಸದಲ್ಲಿ ಲೀನವಾಗಿದ್ದ ಪುಟ್ಟಿಯವರನ್ನು ಕಂಡು ರಾಜುರವರಿಗೆ ಸಹಜವಾಗಿಯೇ ಕೋಪ ಬಂದಿತು. ಅವರ ಕೋಪಕ್ಕೆ ಮತ್ತೊಂದು ಕಾರಣವು ಇತ್ತು. ಅದೆಂದರೆ ತನಗಿಲ್ಲದ ವಿಷಯವನ್ನು ಬೇರೊಬ್ಬರ ತರಗತಿಗೆ ಬಂದು ಕುಳಿತು ಚಿತ್ರ ಬರೆದದ್ದು ಈ ಎರಡೂ ಕಾರಣದಿಂದ ಕೆರಳಿದ ರಾಜುರವರು ಪುಟ್ಟಿಯವರನ್ನು ತರಾಟೆಗೆ ತೆಗೆದುಕೊಂಡು ನಿನಗೆ ಇಲ್ಲಿ ಬರಲು ಅನುಮತಿ ನೀಡಿದವರಾರು ನೀನೇನು ಮಹಾನ್ ಕಲಾವಿದನೆಂದು ತಿಳಿದಿದ್ದೀಯೇನು? ಎಂದು ಗದರಿಸಿದರು. ಆ ಗುರುಗಳು ಕೋಪದಿಂದ ಬೈದದ್ದು ಮತ್ತು ಅವರ ಮನಸ್ಸಿಗೆ ತಾನು ಮಾಡಿದ ಕೆಲಸದಿಂದ ಬೇಜಾರು ಮಾಡಿದಂತಾಯ್ತಲ್ಲ ಎಂದು ನೊಂದುಕೊಂಡ ಪುಟ್ಟಿಯವರು, ಸೀದಾ ತನ್ನ ಪರಿಕರಗಳನ್ನೆಲ್ಲ ಎತ್ತಿಕೊಂಡು ವಾಪಸ್ಸು ಬಂದೇ ಬಿಟ್ಟರು, ತುಂಬ ಸೂಕ್ಷ್ಮತೆಯನ್ನು ತಮ್ಮ ಸ್ವಭಾವದಲ್ಲಿ ಹೊಂದಿದ್ದ ಪುಟ್ಟಿಯವರಿಗೆ ಈ ಘಟನೆ ಮಾನಸಿಕವಾಗಿ ಹಿಂಸಿಸಿತು. ಹಾಗೂ ಮತ್ತೆ ಕಲಾಶಾಲೆಗೆ ವಾಪಸ್ಸು ಹೋದರೆ, ಗುರುಗಳು ಬೈದಾರು ಎಂದು ತಿಳಿದುಕೊಂಡು ಹೋಗುವ ವಿಚಾರವನ್ನೇ ಕೈ ಬಿಟ್ಟರು. ಮೇಲ್ನೋಟಕ್ಕೆ ಇದೊಂದು ಸಾಮಾನ್ಯ ಘಟನೆಯಾದರೂ, ಪುಟ್ಟಿಯವರ ಕಲಾಶಿಕ್ಷಣಕ್ಕೆ ಪೂರ್ಣವಿರಾಮ ನೀಡಬಹುದು ಎಂದು ಸ್ವತಃ ಪುಟ್ಟಿಯವರಿಗೆ ಗೊತ್ತಾಗಲಿಲ್ಲ, ಇದರಿಂದ ಮತ್ತೊಂದು ಸುವರ್ಣಾವಕಾಶವನ್ನು ತಾವೇ ಹಾಳು ಮಾಡಿಕೊಂಡರು.*

ಪುಟ್ಟಿಯವರು ಕಲಾಶಿಕ್ಷಣವನ್ನು ಪೂರ್ತಿಗೊಳಿಸಲಾಗದಿದ್ದರೂ, ಅವರ ಬದುಕಲ್ಲಿ 'ಕಲೆ' ಎಂಬ ಪದ ದಿನನಿತ್ಯ ಅವರ ಸುತ್ತಲೇ ಸುತ್ತುತ್ತಿತ್ತು. ೧೯೩೫ರಲ್ಲಿ ಸರ್ಕಾರದ ಶಿಕ್ಷಣ ಇಲಾಖೆಯಲ್ಲಿ ಕೆಲಸ ಸಿಕ್ಕಿ ಜೀವನ ನಿರ್ವಹಣೆಗೆ ಪರದಾಡಬೇಕಾದ ಪರಿಸ್ಥಿತಿಯಿಂದ ಕೊಂಚ ವಿರಾಮದೊರೆತಂತಾಯಿತು. ಅದು ಮೈಸೂರಿನಲ್ಲಿಯೇ ಸಿಕ್ಕಿದ್ದರಿಂದ ಇನ್ನಷ್ಟು ನೆಮ್ಮದಿ ತಂದಿತೆನ್ನಬಹುದು. ಯಾಕೆಂದರೆ ತನ್ನ ಸ್ನೇಹಿತರನ್ನು ಕಾಣುವ, ಅವರ ಜೊತೆಗೂಡಿ ಕಾಲ ಕಳೆಯುವ ಅವಕಾಶ ಮತ್ತೊಮ್ಮೆ ಸಿಕ್ಕಂತಾಗಿತ್ತು. ಆಗಿನ್ನು ಅವಿವಾಹಿತರಾಗಿದ್ದರಿಂದ ಸಹಜವಾಗಿಯೇ ತಮ್ಮ ಜೊತೆ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಸಹಪಾಠಿಗಳಾಗಿದ್ದ ಶ್ರೀ ಸೋಮಸುಂದರ ಹಾಗೂ ಶ್ರೀ

*(ಈ ಪ್ರಸಂಗದ ಬಗ್ಗೆ ಇದೇ ಕಲಾವಿದರ ಮಾಲಿಕೆಯಲ್ಲಿ ಬರುತ್ತಿರುವ ಎಸ್. ಕಾಳಪ್ಪ ಕುರಿತ ಪುಸ್ತಕದಲ್ಲಿ ಲೇಖಕ ಎಲ್. ಶಿವಲಿಂಗಪ್ಪ ಅವರೂ ಪ್ರಸ್ತಾಪಿಸುತ್ತಾರೆ. ಮೇಲಿನದರ್ಜೆಯ ತರಗತಿಯಲ್ಲಿ ಅಂದು ಪುಟ್ಟಿಯವರೊಂದಿಗೆ ಕಾಳಪ್ಪಸಹ ಚಿತ್ರ ರಚಿಸುತ್ತಿದ್ದರು ಸುಬ್ರಹ್ಮಣ್ಯರಾಜು ಅವರು ಇಬ್ಬರಿಗೂ ಬೈದರಾದರೂ ಕಾಳಪ್ಪ ರೂಪದರ್ಶಿಯ ಭಾವಚಿತ್ರದ ಕೃತಿ ಮುಗಿಸಿ ಸುಬ್ರಹ್ಮಣ್ಯರಾಜು ಅವರಿಗೇ ತೋರಿಸಿ ಮೆಚ್ಚುಗೆ ಪಡೆದು ಶಾಲೆಯನ್ನು ಮುಂದುವರಿಸಿದರು: ಸಂ)

ಎಂ.ಎಸ್.ಚಂದ್ರಶೇಖರ್ ಜೊತೆಗೂಡಿ ರೂಮೊಂದನ್ನು ಬಾಡಿಗೆ ಪಡೆದು ಜೊತೆಯಲ್ಲೇ ವಾಸಿಸತೊಡಗಿದರು. ''ಬಿಡುವೆನೆಂದರೆ ಬಿಡಲೊಲ್ಲದು ಈ ಮಾಯೆ'' ಎಂಬಂತೆ ಅಲ್ಲಿಯೂ ಅವರಿಗೆ ಕಲಾ ವಾತಾವರಣ ದೊರೆಯಿತು.

ಹೀಗೆ ಶಿಕ್ಷಣ ಇಲಾಖೆಯಲ್ಲಿ ಇದ್ದಷ್ಟು ವರ್ಷವೂ ಶ್ರೀ ಪುಟ್ಟಿಯವರು ತಮ್ಮ ಮಿತ್ರರಾದ ಶ್ರೀ ಸೋಮಸುಂದರ, ಶ್ರೀ ಎಂ.ಟಿ.ವ್ಹಿ ಆಚಾರ್ಯ, ಶ್ರೀ ಚಂದ್ರಶೇಖರರವರ ಜೊತೆಗೂಡಿ ಆಗಾಗ ವಿವಿಧ ಸ್ಥಳಗಳಿಗೆ ತೆರಳಿ ನಿಸರ್ಗ ಚಿತ್ರಗಳನ್ನು ರಚಿಸುತ್ತಿದ್ದರು. ಸರ್ಕಾರಿ ಕೆಲಸದ ಜೊತೆ ಜೊತೆಗೆ ಚಿತ್ರಕಲೆಯನ್ನು ಮಿತ್ರರಿಂದ ಅಭ್ಯಾಸ ಮಾಡುತ್ತ ತಮ್ಮಲ್ಲಿರುವ ಕಲಾವಿದನನ್ನು ಜೀವಂತವಾಗಿರಿಸಿಕೊಂಡರು. ಈ ಸಂದರ್ಭದಲ್ಲಿ ತಮಗೆ ನಿಸರ್ಗ ಚಿತ್ರ ರಚಿಸಲು ಸಲಹೆ, ಸಹಕಾರ, ನೀಡಿದ ತಮ್ಮ ಆ ಹಳೆಯ ಮಿತ್ರರನ್ನು ಇಂದಿಗೂ ನೆನೆಯುತ್ತಾರೆ. ಅದರಲ್ಲೂ ಮುಖ್ಯವಾಗಿ ಶ್ರೀ ಸೋಮಸುಂದರ ಅವರ ಆತ್ಮೀಯತೆಯನ್ನು ಅವರು ಇವರಿಗೆ ನೀಡಿದ ಉತ್ತೇಜನ ಸ್ಫೂರ್ತಿಯನ್ನು ಸ್ಮರಿಸಿಕೊಳ್ಳುತ್ತಾ, ಅವರೇ ನನಗೆ ನಿಜವಾದ 'ಕಲಾಗುರು' ಎಂದು ವಿನಮ್ರತೆಯಿಂದ ಹೇಳುತ್ತಾರೆ.

೧೯೪೦ರಲ್ಲಿ ಹಾಸನದ ಲಲಿತ ಅವರನ್ನು ವಿವಾಹವಾದರು. ಒಬ್ಬ ಸಾಮಾನ್ಯ ಮಹಿಳೆ ತನ್ನ ಬಿಡುವಿನ ವೇಳೆಯಲ್ಲಿ ಬೇರೆ ಬೇರೆ ಕೆಲಸಗಳಿಗೆ ಮೊರೆ ಹೋಗುವಂತೆ, ಲಲಿತರವರು ಸಹ ತಮಗೆ ದೊರೆತ ವಿಶ್ರಾಂತ ಸಮಯವನ್ನು ಹಾಳು ಮಾಡದೇ, ಅದನ್ನು ಸಮಯೋಚಿತವಾಗಿ ಬಳಸಿಕೊಂಡು 'ಎಂಬ್ರಾಯಡರಿ' (ಕಸೂತಿಕಲೆ) ಕಲೆಯನ್ನು ಕಲಿತು, ಕರಗತ ಮಾಡಿಕೊಂಡರು. ಇವರು ರಚಿಸಿದ್ದು ಸಾಮಾನ್ಯ ಚಿತ್ರಗಳಲ್ಲ. ಬದಲಿಗೆ ಹೆಸರಾಂತ ರಾಷ್ಟ್ರನಾಯಕರ ಭಾವಚಿತ್ರಗಳು, ನಿಸರ್ಗದೃಶ್ಯಗಳು, ವಿಧವಾದ ಪ್ರಾಣಿ ಪಕ್ಷಿಗಳು, ಕೆಲವು ಸಂಯೋಜನಾ ವಿಷಯಗಳನ್ನು ದಾರದಿಂದ ಹೊಲಿಗೆ ಹಾಕುವ ಮೂಲಕ, ಅವು ಬರೀ ಸಾಮಾನ್ಯ ಚಿತ್ರಗಳಾಗದೇ ಒಂದು ಉತ್ಕೃಷ್ಟ ಕಲಾಕೃತಿಯ ಮೌಲ್ಯವನ್ನು ಹೊಂದುವಂತೆ ಮಾಡಿದ್ದಾರೆ. ತಮ್ಮ ಪತ್ನಿಯಲ್ಲಿರುವ ಕಲಾಪ್ರಜ್ಞೆಯನ್ನು ಕಂಡು ಪುಟ್ಟಿಯವರು ಸಹ ಅವರ ಚಿತ್ರಗಳಿಗೆ ರೇಖಾಚಿತ್ರಗಳನ್ನು ರಚಿಸಿಕೊಡುತ್ತ ಉತ್ತೇಜನ ನೀಡುತ್ತಾ ಬಂದಿದ್ದಾರೆ. ಅವರೂ ಕಸೂತಿ ಕಲೆಯಲ್ಲಿ ಪರಿಣತಿ ಹೊಂದಿದ್ದಾರೆ.

ಲಲಿತ ಅವರು ರಚಿಸಿರುವ ಕೃತಿಗಳಲ್ಲಿ ಮುಖ್ಯವಾಗಿ ಮೈಸೂರು ಅರಮನೆಯ ರಾಜ ಲಾಂಛನಕ್ಕಾಗಿ ಗಂಡ ಬೇರುಂಡ ಕಲಾಕೃತಿಯನ್ನು ಕಸೂತಿಯಲ್ಲಿ ರಚಿಸಿದ್ದಾರೆ. ಇವರ ಗುರುನಾನಕ್ ಕಲಾಕೃತಿಗೆ ಅಮೃತಸರದ ಪಂಜಾಬ ಅಕಾಡೆಮಿಯು ಚಿನ್ನದ ಪದಕ ನೀಡಿ ಗೌರವಿಸಿದೆ. ಆಗ ಭಾರತದ ಖ್ಯಾತ ಕಲಾವಿದ ಠಾಕೂರ್‌ಸಿಂಗ್ ಅಕಾಡೆಮಿಯ ಅಧ್ಯಕ್ಷರಾಗಿದ್ದರು.

ಪುಟ್ಟಿ ಅವರು ಶಿಕ್ಷಣ ಇಲಾಖೆಯ ವಿವಿಧ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸಿ ಅಂತಿಮವಾಗಿ ಮೈಸೂರು ವಿಶ್ವವಿದ್ಯಾಲಯದಿಂದ ೧೯೭೪ರಲ್ಲಿ ನಿವೃತ್ತರಾದರು. ಆ ವೇಳೆಗೆ ಮಕ್ಕಳು ಬೆಳೆದು ದೊಡ್ಡವರಾಗಿ ಸ್ವಾವಲಂಬಿಗಳಾಗಿದ್ದರು. ಇದೀಗ ಪುಟ್ಟಿಯವರಿಗೆ ಚಿತ್ರಕಲೆಯಲ್ಲಿಯೇ ತೊಡಗಿಕೊಳ್ಳಲು ಸಂಪೂರ್ಣ ಅವಕಾಶ ದೊರೆಯಿತು.

ಆದರೂ ನಿವೃತ್ತಿ ವೇತನದಿಂದ ಬರುವ ಹಣ ಜೀವನ ನಿರ್ವಹಣೆಗೆ ಸಾಕಾಗದಾಗ ಅನಿವಾರ್ಯವಾಗಿ 'ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ'ದಲ್ಲಿ ಅರೆಕಾಲಿಕ ಕೆಲಸಕ್ಕೆ ಸೇರಿದರು. ಇದರ ಜೊತೆ ಜೊತೆಗೆ ಮೈಸೂರಿನ ಹೆಸರಾಂತ ಕಲಾಶಾಲೆಯಾದ ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್‌ನಲ್ಲಿ ಸಂಜೆ ಹೊತ್ತು ಚಿತ್ರಕಲಾ ಉಪನ್ಯಾಸಕನಾಗಿ ಕಾರ್ಯ ನಿರ್ವಹಿಸುತ್ತ ವಿದ್ಯಾರ್ಥಿಗಳಿಗೆ ಚಿತ್ರಕಲೆ ಹೇಳಿಕೊಡುತ್ತ ಜೊತೆಗೆ ತಾವೂ ಕಲಾಕೃತಿಗಳನ್ನು ರಚಿಸುತ್ತಾ ಬಂದರು. ಈ ಕಲಾಶಾಲೆಯನ್ನು ಆಗ ಕಲಾವಿದ ಶ್ರೀ ಎಸ್. ಕಾಳಪ್ಪನವರು ನಡೆಸುತ್ತಿದ್ದರು. ಹೀಗಾಗಿ ಕಲಾವಿದರೊಡಗಿನ ಅವರ ಸಂಬಂಧ ಮತ್ತಷ್ಟು ಗಟ್ಟಿಯಾಗುತ್ತ ಹೋಯಿತು.

ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ಆಗ ನಡೆಯುತ್ತಿದ್ದ ಅನೇಕ ಕಲಾ ಪ್ರದರ್ಶನಗಳಿಗೆ ಕಲಾಕೃತಿಗಳನ್ನು ಆಗಾಗ ಪುಟ್ಟಿಯವರು ಕಳಿಸಿಕೊಡುತ್ತಿದ್ದರು. ಕಲಾವಿದರಾಗಿದ್ದ ಕಾಳಪ್ಪ, ವಿಷ್ಣುದಾಸ್‌ರಾಮದಾಸ್, ಗುರು, ಪಿ.ಆರ್. ತಿಪ್ಪೇಸ್ವಾಮಿ ಮುಂತಾದ ಮೈಸೂರಿನ ಅಗ್ರಗಣ್ಯ ಕಲಾವಿದರೊಂದಿಗೆ ಆತ್ಮೀಯ ಒಡನಾಟ ಇಟ್ಟುಕೊಂಡಿದ್ದರು. ಹೀಗೆ ನಿವೃತ್ತಿ ಹೊಂದಿದ್ದರು ಸಹ ಅವರೊಳಗಿನ ಕಲಾವಿದ ಈಗ ತಾನೇ ಹೊಸ ಹುರುಪಿನೊಂದಿಗೆ ಮುನ್ನಗ್ಗಲು ತವಕಿಸುತ್ತಿದ್ದ. ಹೀಗೆ ಕಾಲ ಕಳೆಯುತ್ತಿರಬೇಕಾದರೆ ಒಮ್ಮೆ ಕರ್ನಾಟಕ ಲಲಿತ ಕಲಾ ಅಕಾಡೆಮಿಯವರು ಕರ್ನಾಟಕದ ವೃತ್ತಿನಿರತ ಕಲಾವಿದರಿಗೆ ಏಕವ್ಯಕ್ತಿ ಪ್ರದರ್ಶನ ಮಾಡಲು ಧನಸಹಾಯ ನೀಡುವುದಾಗಿ ಕೇಳಿ ತಿಳಿದ ಪುಟ್ಟಿಯವರು ಧನಸಹಾಯಕ್ಕಾಗಿ ಅಕಾಡೆಮಿಗೆ ಅರ್ಜಿ ಸಲ್ಲಿಸಿದರು. ಆದರೆ ಆಗ ಇವರ ಅದೃಷ್ಟ ಚೆನ್ನಾಗಿರಲಿಲ್ಲವೆಂದು ಕಾಣುತ್ತೆ. ಇವರಿಗೆ ಅಕಾಡೆಮಿಯ ಸಹಾಯಧನ ಸಿಗಲಿಲ್ಲ. ಇವರ ಅರ್ಜಿಯು ತಿರಸ್ಕರಿಸಲ್ಪಟ್ಟಿತ್ತು. ಇದರಿಂದ ಸ್ವಲ್ಪ ಮಾನಸಿಕವಾಗಿ ನೊಂದುಕೊಂಡು, ವಿಚಲಿತರಾಗಿ, ತಮ್ಮ ಮನಸ್ಸಿನ ಖೇದವನ್ನು ತಮ್ಮ ಆತ್ಮೀಯ ಸ್ನೇಹಿತರಲ್ಲಿ ಹೇಳಿಕೊಂಡರು. ಇದನ್ನು ಆಲಿಸಿದ ಸ್ನೇಹಿತರು ಆಗ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿದ್ದ ಕಲಾವಿದ ಶ್ರೀ ಪಿ.ಆರ್. ತಿಪ್ಪೇಸ್ವಾಮಿಯವರಲ್ಲಿ ಈ ವಿಷಯ ಪ್ರಸ್ತಾಪಿಸಿದಾಗ ಅದಕ್ಕೆ ತಿಪ್ಪೇಸ್ವಾಮಿಯವರು ''ಪುಟ್ಟಿಯವರಲ್ಲಿ ಒಂದಾದರೂ ಒಳ್ಳೆಯ ಕೃತಿ ಇದೆಯೇ?'' ಎಂದು ವ್ಯಂಗ್ಯವಾಗಿ ಕೇಳಿದರು. ಬಹುಶಃ ತಮ್ಮ ಈ ಮಾತಿನ ಪರಿಣಾಮ ಮುಂದೆ ಏನಾಗಬಹುದು ಎಂಬುದು ಆ ಕ್ಷಣದಲ್ಲಿ ತಿಪ್ಪೇಸ್ವಾಮಿಯವರಿಗೂ ಗೊತ್ತಿರಲಿಕ್ಕಿಲ್ಲ!

ಹೇಗೋ ಈ ವಿಷಯ ಪುಟ್ಟಿಯವರ ಕಿವಿಗೆ ತಲುಪೇ ಬಿಟ್ಟಿತು. ಮೊದಲೇ ಸೂಕ್ಷ್ಮ ಸ್ವಭಾವದ ತಮ್ಮ ಜೀವನದುದ್ದಕ್ಕೂ ಸುಖಕ್ಕಿಂತ ಹೆಚ್ಚು ನೋವನ್ನೇ ಕಂಡಿದ್ದ ಪುಟ್ಟಿಯವರಿಗೆ ಈ ಮಾತಿನ ಚೂಪು, ಅವರ ಆ ಮುಗ್ಧ ಹೃದಯವನ್ನು ಚುಚ್ಚಿ ಬಿಟ್ಟಿತು. ಒಂದು ಕ್ಷಣ ಆ ಮಾತಿನ ವ್ಯಂಗ್ಯ ಅವರ ಅದುವರೆಗಿನ ಕಲಾಸೇವೆಯನ್ನು ಪರೀಕ್ಷಿಸಿಕೊಳ್ಳುವಂತಾಯಿತು. ಆ ಮಾತು ಅವರನ್ನು ಅಂತರಂಗದಲ್ಲಿ ಆಗಾಗ ಅಣಕಿಸುತ್ತಲೇ ಇತ್ತು. ನಾನು ಇಷ್ಟು ವರ್ಷದಿಂದ ಕಲಾಕೃತಿಗಳನ್ನು ರಚಿಸಿದ್ದರೂ, ನನ್ನ ಕೃತಿಗಳು ಉತ್ತಮ ಮೌಲ್ಯಗಳನ್ನು ಹೊಂದಲಿಲ್ಲವೆಂದೂ ನನ್ನ ಕೃತಿಗಳಲ್ಲಿ ಯಾವ ಕೊರತೆ ಇದೆಯೆಂದೂ, ಇದಕ್ಕಿಂತಲೂ ಉತ್ತಮ ಕೃತಿಗಳನ್ನು ರಚಿಸಿ ಎಲ್ಲರಿಗೂ ಮೆಚ್ಚುವಂತಾಗಬೇಕೆಂದು, ಬಹಳಷ್ಟು ಆಲೋಚಿಸಿ ಒಂದು ದೀರ್ಘ ಪಯಣದ, ಕಠಿಣ ತಪಸ್ಸಿನ ಮಾರ್ಗವನ್ನು ಹಿಡಿಯಲು ಸಜ್ಜಾಗಿಯೇ ಬಿಟ್ಟರು.

೧೯೭೪ರ ಅವಧಿ, ಒಂದು ದಿನ ತಮ್ಮ ಚಿತ್ರ ಬರೆಯುವ ಪರಿಕರಗಳೊಂದಿಗೆ, ಲಗ್ಗೇಜು ಸಮೇತ ಹಂಪೆ ಪ್ರವಾಸಕ್ಕೆ ಪ್ರಕೃತಿ ಚಿತ್ರಗಳನ್ನು ಅಭ್ಯಾಸ ಮಾಡಲು ಹೊರಟರು. ಹಂಪೆಗೆ ಹೋಗಿ ಅಲ್ಲಿ ಸುಮಾರು ೩ ತಿಂಗಳುಗಳ ಕಾಲ ಇದ್ದು, ಅಲ್ಲಿನ ಭಗ್ನ ಅವಶೇಷಗಳು, ದೇವಾಲಯಗಳು, ಕೋಟೆ- ಕೊತ್ತಲುಗಳು ಮತ್ತು ಆ ಸುಂದರ ಪರಿಸರದ ಪ್ರಕೃತಿ ದೇವಿಯನ್ನು ತಮ್ಮ ಕುಂಚಗಳಲ್ಲಿ ಸೆರೆ ಹಿಡಿದರು. ಈ ಹಂಪೆಯ ಕಲಾಪ್ರವಾಸ ಅವರಿಗೆ ಬದುಕಲ್ಲಿ ಹೊಸ ಹುಮ್ಮಸ್ಸು, ಆತ್ಮವಿಶ್ವಾಸ, ಹಾಗೂ ಉತ್ತಮ ಕೃತಿಗಳನ್ನು ರಚಿಸಬಲ್ಲೆ ಎಂಬ ದೃಢ ನಿರ್ಧಾರವನ್ನು ತಂದುಕೊಟ್ಟಿತು. ಅಲ್ಲಿಂದ ಹಿಂತಿರುಗಿದ ನಂತರ ತಮ್ಮ ಸ್ನೇಹಿತರಿಗೆಲ್ಲ ಆಕೃತಿಗಳನ್ನು ತೋರಿಸಲಾಗಿ ಅವರೆಲ್ಲ ತುಂಬಾ ಸಂತೋಷದಿಂದ ಮೆಚ್ಚಿ ಒಂದು ಏಕವ್ಯಕ್ತಿ ಪ್ರದರ್ಶನ ಮಾಡು ಎಂದು ದುಂಬಾಲು ಬಿದ್ದರು. ಸ್ನೇಹಿತರ ಒತ್ತಾಯ ಹಾಗೂ ಸ್ವ-ಇಚ್ಛೆಯಂತೆ ಕಲಾ ಪ್ರದರ್ಶನ ಏರ್ಪಡಿಸಬೇಕೆಂದರು. ಆದರೆ ಆರ್ಥಿಕವಾದ ಅಚಡಣೆ ಅಡ್ಡ ಬಂದಿದ್ದರಿಂದ, ಮತ್ತೊಮ್ಮೆ ಕರ್ನಾಟಕ ಲಲಿತ ಕಲಾ ಅಕಾಡೆಮಿಗೆ ಧನಸಹಾಯ ಕೋರಿ ಅರ್ಜಿ ಹಾಕಿದರು. ಇದು ಅವರ ಕೊನೆಯ ಪ್ರಯತ್ನದಂತಿತ್ತು. ಆದರೆ ಹಾಗಾಗಲಿಲ್ಲ! ಅವರ ಅಭಿಲಾಷೆಯಂತೆಯೇ ಲಲಿತಕಲಾ ಅಕಾಡೆಮಿಯಿಂದ ಧನಸಹಾಯ ಸಿಕ್ಕಿತು. ಅವರ ಏಕವ್ಯಕ್ತಿ ಕಲಾಪ್ರದರ್ಶನವು ಯಶಸ್ವಿಯಾಗಿ ನೆರವೇರಿತು. ಮುಖ್ಯವಾಗಿ ಈ ಸಂದರ್ಭದಲ್ಲಿ ತಮ್ಮ ಹಿಂದಿನ ಕಲಾಗುರುಗಳಾಗಿದ್ದ ಶ್ರೀ ಸುಬ್ರಹ್ಮಣ್ಯರಾಜು ಅವರನ್ನೇ ಉದ್ಘಾಟನೆಗೆ ಆಹ್ವಾನಿಸಿದ್ದರು. ಆಗಲೇ ಎಲ್ಲರಿಗೂ ಗೊತ್ತಾದದ್ದು, ಪುಟ್ಟಿಯವರಲ್ಲಿರುವ ಪ್ರತಿಭೆಯ ಪ್ರಭಾವ.

ಈ ಒಂದು ಕಲಾ ಪ್ರದರ್ಶನ ಅವರಿಗೆ ಮುಂದಿನ ಕಲಾ ಬದುಕಿಗೆ ಹೊಸ ದಾರಿ ತೋರಿತೆನ್ನಬಹುದು. ಇಲ್ಲಿ ತಿಪ್ಪೇಸ್ವಾಮಿಯವರು ಅಪರೋಕ್ಷವಾಗಿ ಪುಟ್ಟಿಯವರಲ್ಲಿನ ಕಲಾವಿದನನ್ನು ಜಾಗೃತನನ್ನಾಗಿ ಮಾಡಿ ಆತ ಹೊರ ಜಗತ್ತಿಗೆ ಕಾಲಿಡುವಂತಾಯಿತು. ಅದಕ್ಕಾಗಿ ತಿಪ್ಪೇಸ್ವಾಮಿಯವರಿಗೆ ನಾವು ಕೃತಜ್ಞತೆ ಸಲ್ಲಿಸಬೇಕು. ಬದುಕು! ಎಷ್ಟು ವಿಚಿತ್ರವೆಂದರೆ! ಒಮ್ಮೆ ವ್ಯಂಗ್ಯವಾಗಿ ನಿಂದಿಸಿದ್ದ ಅದೇ ವ್ಯಕ್ತಿ, ನಂತರ ಅವರ ಸಾಧನೆ ಏಳ್ಗೆಯನ್ನು ಮುಕ್ತ ಕಂಠದಿಂದ ಹೊಗಳಿ ''ವರ್ಣಶಿಲ್ಪಿ'' ಎಂಬ ಬಿರುದನ್ನು ನೀಡಿ. ಅವರ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸುತ್ತ ತಮ್ಮ ''ಕಲಾವಿದನ ನೆನಪುಗಳು'' ಎಂಬ ಪುಸ್ತಕದಲ್ಲಿ ಪುಟ್ಟಿಯವರ ಬಗ್ಗೆ ಲೇಖನವನ್ನು ಬರೆದಿದ್ದಾರೆ. ಬಹುಶಃ ಇದು ಒಬ್ಬ ಶ್ರೇಷ್ಠ ಕಲಾವಿದ ಇನ್ನೊಬ್ಬ ಸಾಧಕನಿಗೆ ಸಲ್ಲಿಸುವ ಗೌರವ ಎನ್ನಬಹುದು.

ಹಳೇ ಮೈಸೂರಿನ ಕೃಷ್ಣಮೂರ್ತಿ ಪುರಂನ ೩ನೇ ಮುಖ್ಯರಸ್ತೆಯಲ್ಲಿರುವ ೧೩೫೦ ನಂಬರಿನ ಮನೆಯೊಂದು ಹೊರನೋಟಕ್ಕೆ ಸಾಮಾನ್ಯ ಮನೆಯ ಲಕ್ಷಣಗಳನ್ನೇ ಹೊಂದಿದೆ. ಅಪರಿಚಿತರ್ಯಾರಿಗೂ ಈ ಮನೆಯ ವೈಶಿಷ್ಟ್ಯ ಗೊತ್ತಾಗದು. ಆದರೆ ಬಹಳಷ್ಟು ಜನರು ಮನೆಯ ಒಳಹೊಕ್ಕು ಆಶ್ಚರ್ಯಗೊಂಡಿದ್ದಾರೆ. ಪುಟ್ಟಿಯವರ ಮನೆಯವರೆಲ್ಲ ಸೇರಿ ಪ್ರೀತಿಯಿಂದ ಅವರ ಕೃತಿಗಳನ್ನೆಲ್ಲಾ ವ್ಯವಸ್ಥಿತವಾಗಿ ಫ್ರೇಂ ಹಾಕಿಸಿ ಪ್ರದರ್ಶನಕ್ಕಿಟ್ಟು ಇಡೀ ಮನೆಯನ್ನೇ ಕಲಾಗ್ಯಾಲರಿಯಾಗಿ ಪರಿವರ್ತಿಸಿದ್ದಾರೆ. ಮನೆಯ ಎರಡೂ ಮಹಡಿಯಲ್ಲಿ ಎಲ್ಲಿ ನೋಡಿದರೂ ಪುಟ್ಟಿಯವರ ಕಲಾಕೃತಿಗಳು ಕಾಣುವ ಹಾಗೆ ವ್ಯವಸ್ಥೆ ಮಾಡಿದ್ದಾರೆ. ಇದು ಅವರಲ್ಲಿರುವ ಕಲಾಪ್ರಜ್ಞೆಯನ್ನು ತೋರಿಸುತ್ತದೆ.



ಮನೆಯೇ ಆರ್ಟ್ ಗ್ಯಾಲರಿ / House itself an Art Gallery

ಪುಟ್ಟಿಯವರ ಮೊದಲನೇ ಮಗಳಾದ ಶ್ರೀಮತಿ ಸುಧಾರವರು ಸಹಜವಾಗಿಯೇ ಚಿತ್ರಕಲೆಯ ಬಗ್ಗೆ ಒಲುವು ತೋರಿ, ಹೆಸರಾಂತ ಕಲಾವಿದ ಎಸ್.ಕಾಳಪ್ಪನವರ ಹತ್ತಿರ ಚಿತ್ರಕಲೆಯನ್ನು ಅಭ್ಯಾಸ ಮಾಡಿದ್ದಾರೆ ಮತ್ತು ಕೃತಿಗಳನ್ನು ರಚಿಸುತ್ತಿದ್ದಾರೆ.

ಕೊನೆಯ ಮಗಳಾದ ಶ್ರೀಮತಿ ನಂದಾರವರು, ತಂದೆಯಿಂದಲೇ ಚಿತ್ರಕಲಾಭ್ಯಾಸ ಕಲಿತು, ಈಗ ಶಿಕ್ಷಣ ಸಂಸ್ಥೆಯೊಂದರಲ್ಲಿ ಚಿತ್ರಕಲಾ ಶಿಕ್ಷಕಿಯಾಗಿ ಸೇವೆ ಸಲ್ಲಿಸುವುದರ ಜೊತೆಗೆ, ತಂದೆಯೊಂದಿಗೆ ಸೇರಿ ಆಸಕ್ತರಿಗೆ ಚಿತ್ರಕಲೆಯನ್ನು ಕಲಿಸುತ್ತಿದ್ದಾರೆ. ಹಿರಿಯ ಪುತ್ರರಾದ ಶ್ರೀ ಯತೀಂದ್ರ ಪುಟ್ಟಿ (ಬೊಂಬಾಯಿಯಲ್ಲಿ ಅಸಿಸ್ಟೆಂಟ್ ಮ್ಯಾನೇಜರ್) ಹಾಗೂ ಅವರ ಶ್ರೀಮತಿ ಸುಮಿತ್ರರವರು ಸಹ ಕಲೆಯ ಬಗೆಗೆ ಒಲವಿದ್ದು ಪುಟ್ಟಿಯವರಿಗೆ ಪ್ರೋತ್ಸಾಹಿಸುತ್ತ ಬಂದಿದ್ದಾರೆ. ಎರಡನೆಯ ಮಗ ಶ್ರೀನಿವಾಸ ಹಾಗೂ ಅವರ ಪತ್ನಿ ವೀಣಾ ಹಾಗೂ ಇವರ ಮಗಳು ಅಶ್ವಿನಿ ಅವರುಗಳು, ಮೂರನೆಯ ಮಗ ಯದುಪತಿ ಹಾಗೂ ಅವರ ಪತ್ನಿ ಗೀತ ಅವರುಗಳೊಂದಿಗೆ ತುಂಬು ಸಂಸಾರದಲ್ಲಿ ಕಲೆಯ ವಾತಾವರಣದಲ್ಲಿ ಹರೆಯದ ಹುಮ್ಮಸ್ಸಿನಿಂದಲೇ ಕ್ರಿಯಾಶೀಲರಾಗಿದ್ದಾರೆ ರಘೋತ್ತಮ ಪುಟ್ಟಿಯವರು.

ಶ್ರೀ ರಘೋತ್ತಮ ಪುಟ್ಟಿಯವರು ಕಳೆದ ಏಳು ದಶಕಗಳಿಂದ ಕುಂಚ, ಬಣ್ಣಗಳೊಂದಿಗೆ ಬದುಕುತ್ತ ಅವುಗಳೊಂದಿಗೆ ಸ್ಪಂದಿಸುತ್ತ ತಮಗಿಷ್ಟವಾದ ಪ್ರಕೃತಿ ದೃಶ್ಯಗಳು, ವ್ಯಕ್ತಿಗಳು, ಸ್ಥಳಗಳು, ಹೀಗೆ ಬರೆಯುತ್ತ ಅವುಗಳಿಗೆ ಹೊಸಹುಟ್ಟು ನೀಡಲು ಪ್ರಯತ್ನಿಸುತ್ತಲೇ ಇದ್ದಾರೆ. ಸಾಕಷ್ಟು ಪ್ರಬುದ್ಧ ಕಲಾ ಕೃತಿಗಳನ್ನು ರಚಿಸಿದ್ದರೂ, ಇನ್ನೂ ತಾನು ಕಲಿಯಬೇಕಾದ್ದು ಬಹಳಷ್ಟಿದೆ ಎಂದು ನಂಬಿರುವ ಪ್ರಾಮಾಣಿಕ ಕಲಾವಿದ ಇವರು.

ಶ್ರೀ ಪುಟ್ಟಿಯವರು ಚಿತ್ರಕಲೆಯ ವಿವಿಧ ಮಾಧ್ಯಮಗಳಲ್ಲಿ ಕೈಯಾಡಿಸಿದ್ದರೂ ಸಹ ಅವರು

ಹೆಚ್ಚಾಗಿ ಇಷ್ಟಪಡುವುದು ಜಲವರ್ಣ. ಕಡಿಮೆ ಅವಧಿಯಲ್ಲಿ ಒಂದು ಕೃತಿ ರಚಿಸುವಾಗ, ಅಲ್ಲಿಸವಾಲು ಇರುತ್ತದೆ. ಮತ್ತು ಜಲವರ್ಣವನ್ನು ಬಳಸುವುದು ತುಂಬಾ ಕಷ್ಟದ ಕೆಲಸ. ಕಲಾವಿದ ಆ ಮಾಧ್ಯಮದಲ್ಲಿ ಹಿಡಿತ ಹೊಂದಿದ್ದರೆ ಮಾತ್ರ ಅದರಲ್ಲಿ ಪಾರದರ್ಶಕತೆಯನ್ನು ತರಲು ಸಾಧ್ಯ. ಕೃತಿಯಲ್ಲಿ ಪಾರದರ್ಶಕತೆ ಇರದಿದ್ದರೆ! ಜಲವರ್ಣಕ್ಕೆ ಮಹತ್ವ ಬರಲು ಸಾಧ್ಯವಿಲ್ಲ ಎಂದು ಗಂಭೀರವಾಗಿ ಹೇಳುತ್ತಾರೆ.

ಪುಟ್ಟಿಯವರ ಕೃತಿಗಳನ್ನು ನಾವು ನೋಡಿದಾಗ ಅವುಗಳಲ್ಲಿ ಐದು ವಿವಿಧ ವಿಷಯಗಳನ್ನು ಆಯ್ದುಕೊಂಡಿರುವುದು ಕಂಡು ಬರುತ್ತದೆ. ಅವುಗಳನ್ನು ಈ ಕೆಳಕಂಡಂತೆ ನೋಡಬಹುದು.

೧. ಪುರಾತನ ಪಾಳು ದೇಗುಲಗಳು ಹಾಗೂ ಕಟ್ಟಡಗಳು.

೨. ಹೊಯ್ಸಳ ಕಾಲದ ಸೂಕ್ಷ್ಮ ಕೆತ್ತನೆಯ ದೇವಾಲಯಗಳು.

೩. ಹಳ್ಳಿಯ ಜೀವನಕ್ಕೆ ಸಂಬಂಧಿಸಿದ ದೃಶ್ಯಗಳು.

೪. ಹೆಚ್ಚಾಗಿ ಹಸಿರು ಹಿನ್ನಲೆ ಒಳಗೊಂಡಿರುವ ನಿಸರ್ಗ ಚಿತ್ರಗಳು.

೫. ಸಂಯೋಜನೆ ಹಾಗೂ ಭಾವ ಚಿತ್ರಗಳು.

ಪುಟ್ಟಿಯವರ ಹೆಚ್ಚಿನ ಕೃತಿಗಳು ಜಲವರ್ಣದಲ್ಲಿವೆ. ೧೯೭೪ ರಿಂದ ೧೯೯೫ ರವರೆಗೆ ಸುಮಾರು ೨೦ ವರ್ಷಗಳು ಜಲವರ್ಣದಲ್ಲಿ ನೂರಾರು ಕೃತಿ ರಚಿಸಿದ್ದಾರೆ.

**ಶ್ರೀ ರಘೋತ್ತಮ ಪುಟ್ಟಿಯವರೊಂದಿಗೆ ಕಲೆಯ ಕುರಿತು ಚರ್ಚಿಸಿದಾಗ, ಬಂದ ಉತ್ತರಗಳಿವು**

***ಕಲಾಕೃತಿಯಲ್ಲಿ ಸೌಂದರ್ಯ ಕಾಣುವುದು ಹೇಗೆ?***

ಅನೇಕ ಗುಣಗಳು ಮಾನವರಿಗೆ ಸ್ವಾಭಾವಿಕವಾಗಿಯೇ ಮೈಗೂಡಿಕೊಂಡಿರುತ್ತದೆ. ಈ ಹುಟ್ಟು ಗುಣಗಳಲ್ಲಿ ಸೌಂದರ್ಯೋಪಾಸನೆಯೂ ಒಂದು. ಮನುಷ್ಯನಿಗೆ ಮನಶಾಂತಿ ಮತ್ತು ಆನಂದ ಲಭಿಸುವುದೇ ಈ ಸೌಂದರ್ಯ ಜ್ಞಾನದಿಂದ ಸೌಂದರ್ಯವಿರುವ ತಾಣವನ್ನು ಗುರುತಿಸಿ ಅದನ್ನು ಅರ್ಥ ಮಾಡಿಕೊಂಡು ಅನುಭವಿಸುವುದು ಮತ್ತು ಅರ್ಥ ಸೌಂದರ್ಯವನ್ನು ಸೃಷ್ಟಿಸಿ ಆನಂದಪಡುವುದು ಇತರರನ್ನು ಆನಂದಗೊಳಿಸುವುದು ಸೌಂದರ್ಯ ಪ್ರಜ್ಞೆ ಅಥವಾ ಆಂಗ್ಲ ಭಾಷೆಯಲ್ಲಿ ಹೇಳುವಂತೆ. Aesthetic Sense ಎನ್ನುವುದು.

ಮನಸ್ಸಿಗೆ ಯಾವುದು ಹಿತವನ್ನು, ಆನಂದವನ್ನು ಉಂಟು ಮಾಡುತ್ತದೋ, ಅವೆಲ್ಲವೂ ಸುಂದರ ವಸ್ತುಗಳು. ಈ ಸುಂದರ ವಸ್ತುಗಳು ನೈಸರ್ಗಿಕವೆನಿಸುವ, ಮರಗಿಡಗಳು, ಬೆಟ್ಟಗುಡ್ಡಗಳು, ನದಿ, ಸಮುದ್ರಗಳು, ಜಲಪಾತಗಳು, ಅರಣ್ಯಗಳು, ಪಶು, ಪಕ್ಷಿಗಳು, ಕಲಾವಿದನ ಕುಂಚದಿಂದ ಮೂಡಿ ಬಂದ ಚಿತ್ರಗಳು ಆಗಿರಬಹುದು. ಈ ಸೌಂದರ್ಯೋಪಾಸನೆಯಿಂದ ಆಗುವ ಆನಂದ ನಾವು ಮಾತಿನಿಂದ ವಿವರಿಸುವುದಕ್ಕೆ ಆಗುವುದಿಲ್ಲ. ಅದು ಕೇವಲ ಅನುಭವವೇದ ಅದಕ್ಕೆ A thing of beauty is a joy for ever ಎಂಬ ಹೇಳಿಕೆ ವಾಡಿಕೆಯಲ್ಲಿದೆ. ಸೌಂದರ್ಯದ ನೆಲೆಯನ್ನು



ಕಡನಾ ಹಳ್ಳಿ, ಗುಜರಾತ / Kadana Village, Gujarat

ಕಂಡು ಹಿಡಿದವನಿಗೆ ಅದೊಂದು ಎಂದಿಗೂ ಬತ್ತದ ಸುಖದ ಮೂಲವಾಗಿ ಪರಿಣಮಿಸುವುದು. ಮನುಷ್ಯನ, ಅದರಲ್ಲೂ ಕಲಾವಿದನ ಬುದ್ಧಿ ಸದಾಕಾಲದಲ್ಲಿಯೂ ಎಲ್ಲ ವಸ್ತುಗಳಲ್ಲಿಯೂ, ಸೌಂದರ್ಯವನ್ನೇ ನೋಡಲು ಅದನ್ನೆ ತನ್ನ ಕುಂಚದಲ್ಲಿ ಸೆರೆ ಹಿಡಿಯಲು ಅಪೇಕ್ಷಿಸುತ್ತದೆ. ಕಲಾವಿದ ಅವನ ಜೀವನದ ಕಷ್ಟಗಳ ಪರಿಣಾಮವಾಗಿ ಅವನ ಕೃತಿಗಳು ಇನ್ನೂ ಹೆಚ್ಚು ಸಮರ್ಪಕವಾಗಿಯೇ ಆಗುವುದುಂಟು. ಧ್ಯೇಯ ಸಾಧನೆಯಿಂದ ಕೂಡಿದ ನಿಜಕಲಾವಿದನಿಗೆ ಬಾಕಿ ಎಲ್ಲ ಭೋಗಭಾಗ್ಯಗಳಿಗಿಂತ ಅವನ ಧ್ಯೇಯ ಸಾಧನೆಯೇ ಅತ್ಯಂತ ಮುಖ್ಯ.

***ನೀವು ನಿಸರ್ಗದತ್ತ ಒಲಿಯಲು ಕಾರಣ?***

ನಿಸರ್ಗದಲ್ಲಿ ಸೌಂದರ್ಯವೇನೊ ತುಂಬಿ ತುಳುಕುತ್ತಲಿದೆ. ಆದರೆ ಅದನ್ನು ನೋಡುವ ಕಣ್ಣುಬೇಕು, ಅದನ್ನು ಅನುಭವಿಸುವ ಕಲಾವಿದ ತನ್ನ ಕುಂಚದಿಂದ ಹೊರ ಹೊಮ್ಮಿಸುವ ಮನೋವೃತ್ತಿಬೇಕು. ಅದನ್ನು ಅನಭವಿಸುವ ಇತರರಲ್ಲಿರುವ ಸೌಂದರ್ಯ ಪ್ರಜ್ಞೆಯನ್ನು ಜಾಗೃತಗೊಳಿಸಿ ಅವರೂ ಆನಂದಪಡುವಂತೆ ಮಾಡುವ ಸಹೃದಯತೆಬೇಕು.

ಮೇಲೆ ಹೇಳಿದ ಕೆಲವು ಮಾತುಗಳೇ ನನ್ನನ್ನು ನಿಸರ್ಗದಲ್ಲಿ ಕುಳಿತು ಪ್ರಕೃತಿ ಚಿತ್ರಗಳನ್ನು ನನ್ನ ಕುಂಚದಿಂದ ಹೊರಹೊಮ್ಮಿಸುವುದಕ್ಕೆ ಪ್ರೇರಣೆ. ಇದನ್ನು ನಾನು ಈ ಕಳೆದ ೨೦, ೨೫ ವರುಷಗಳಿಂದ ಕಾರ್ಯರೂಪಕ್ಕೆ ಇಳಿಸಿ, ನಾನೂ ಆನಂದನುಭವವನ್ನುಪಡೆದಿದ್ದೇನೆ. ನನ್ನ ಕೃತಿಗಳ ಮೂಲಕ ಬಾಕಿಯವರನ್ನು ಆನಂದಗೊಳಿಸಿದ್ದೇನೆ ಎಂದು ನನ್ನ ಮನಸ್ಸು ಹೇಳುತ್ತದೆ. ಈ ಕಾರಣದಿಂದಲೇ ನನ್ನ ನಾಡಿನ ನಾನಾ ಭಾಗಗಳಲ್ಲಿ ನನ್ನ ಏಕವ್ಯಕ್ತಿ ಚಿತ್ರ ಪ್ರದರ್ಶನಗಳನ್ನು ಸಂತೃಪ್ತಿಯಿಂದ ಮಾಡಿದ್ದೇನೆ.

ಇಂದಿಗೂ ಪ್ರಕೃತಿಯ ಮುಂದೆ ಕುಳಿತು ಕುಂಚ ಕಾವ್ಯವನ್ನು ಅರಳಿಸುತ್ತಿದ್ದೇನೆ. ನನ್ನ ಕುಟುಂಬವರ್ಗ, ಎಂದರೆ ನನ್ನ ಚಿರಂಜೀವಿಗಳು, ಹಾಗೂ ನನ್ನ ಕೈ ಹಿಡಿದಾಕೆ ಇದರ ಸಹಕಾರ ನನಗೆ ಪೂರ್ಣ ಪ್ರಮಾಣದಲ್ಲಿ ದೊರಕಿದೆ, ಕಾರಣ ಅವರುಗಳಲ್ಲಿರುವ ಸೌಂದರ್ಯ ಪ್ರಜ್ಞೆ ಎಂದು ಬೇರೆ ಹೇಳಬೇಕಾಗಿಲ್ಲ. ಇದರ ಪರಿಣಾಮವೇ ನನ್ನ ಮನೆಯಲ್ಲಿ ಒಂದು ಸಣ್ಣ ನಿಸರ್ಗ ಚಿತ್ರಗಳ ಗ್ಯಾಲರಿ ಹುಟ್ಟಿರುವುದು.

***ನವಕಲೆ ಕುರಿತು ತಮ್ಮ ಅಭಿಪ್ರಾಯ?***

ಕಲೆ ಎಂಬುದು ಜನ ಜೀವನವನ್ನು ಸುಂದರವಾಗಿಯೂ ಆನಂದದಾಯಕವಾಗಿಯೂ ಮಾಡುವುದಕ್ಕೆ ಒಂದು ಸಾಧನ, ಅದಕ್ಕೆ ಹೇಳುವುದು ಕಲೆಯೇ ಸೌಂದರ್ಯ, ಸೌಂದರ್ಯವೇ ಕಲೆ ಎಂದು. ನನ್ನ ಮನಸ್ಸಿಗೆ ತೋಚುವ ಒಂದೆರಡು ಮಾತುಗಳಿಂದ ಇದನ್ನು ಮುಗಿಸುತ್ತೇನೆ.

ಕಲಾಜಗತ್ತು ಒಂದು ವಿಶಾಲವಾದ ವಿವಿಧ ಮನೋವೃತ್ತಿಗಳಿಂದ ಕೂಡಿದ ಕಾರ್ಯಕ್ಷೇತ್ರವನ್ನು ಹೊಂದಿದೆ. ಇದರಲ್ಲಿ ಕಲಾವಿದರನ್ನು ಸಾಮಾನ್ಯದ ಅರ್ಥದಲ್ಲಿ ಎರಡು ಗುಂಪುಗಳಾಗಿ ವಿಂಗಡಿಸಬಹುದು. ಒಂದು ಭಾವೋದ್ವೇಗದಿಂದ ಕೂಡಿದ ಎಂದರೆ ತನ್ನ ಕಣ್ಣಿಗೆ ಕಾಣುವ ವಸ್ತುವಿನ ಚಿತ್ರಣದಿಂದ ಜನಜೀವನವನ್ನು ಆನಂದದಾಯಕವಾಗಿ ಮಾಡುವುದು. ಇನ್ನೊಂದು ಕಲಾವಿದನ ಅಂತರಂಗ ಉದ್ವೇಗದ ಅನುಭವದಿಂದ ಬರುವಂತಹದು. ಒಂದು ಮೂರ್ತ, ಇನ್ನೊಂದು ಅಮೂರ್ತ (Abstract) ಅಥವಾ ಸಮಕಾಲೀನ ಕಲೆ. ಭಾವೋದ್ವೇಗ ಕಲಾವಿದನಾದ ನನ್ನಲ್ಲಿ ಈ ಅಮೂರ್ತ ಕಲೆಯ ವಿಚಾರವಾಗಿ ಹೇಳುವ ಧೈರ್ಯವೂ ಇಲ್ಲ. ಹೇಳುವುದಕ್ಕೆ ಶಬ್ಧಗಳೂ ಇಲ್ಲ, ಆದ್ದರಿಂದ ನಾನು ಸಮರ್ಥನೂ ಅಲ್ಲ.

***ಒಂದು ಉತ್ತಮ ಕಲಾಕೃತಿ ಹೇಗಿರಬೇಕು?***

ಕಲಾವಿದನ ಸಾರ್ಥಕ ಕಲಾಚಿತ್ರಣ. ಅದು ಮೂರ್ತವೇ ಆಗಿರಲಿ, ಅಥವಾ ಅಮೂರ್ತವೇ ಆಗಿರಲಿ, ಅದು ಯದ್ವಾತದ್ವ ಆಗುವುದಿಲ್ಲ. ಅದಕ್ಕೆ ಒಂದು ಕ್ರಮ ಉಂಟು. ಒಂದು ಮಿತಿಯುಂಟು. ಇದನ್ನು ಅರಿತು ಚಿತ್ರಿಸಿದ ಕೃತಿಯೇ ಜಯಪ್ರದವಾದದ್ದು, ಕಲಾವಿದನ ಅಂತರಂಗದಲ್ಲಿ ಎಂತಹ ಮಹಾಭಾವನೆಗಳಿದ್ದರೇನು? ಆ ಮಹಾಭಾವನೆಗಳೂ ಆ ಭಾವನೆಗಳಿಂದ ಮೂಡಿ ಬಂದ ಆ ಚಿತ್ರಗಳು, ವೀಕ್ಷಕನ ಮನಸ್ಸಿನಲ್ಲಿ ಆ ಮಹಾ ಭಾವನೆಗಳು ಏಳುವಂತೆ ಮಾಡಬೇಕಲ್ಲವೇ? ಹಾಗೆ ಮಾಡದಿದ್ದಲ್ಲಿ ಅವನ ಶ್ರಮ ಸಾರ್ಥಕವಾಗದು. ಅವನ ಮಹಾಭಾವನೆಗಳು ನೀರ್ಗಲ್ಲ ಮೇಲೆ ಮಳೆಗರೆದಂತೆ ನಿರರ್ಥಕವಲ್ಲವೇ?

ಕೆಲವು ಕೃತಿಗಳ ವಿವರ

***ಪಶ್ಚಿಮ ವಾಹಿನಿ:-*** ಇದು ಪ್ರಖ್ಯಾತ ಪುಣ್ಯಕ್ಷೇತ್ರ, ಶ್ರೀರಂಗ ಪಟ್ಟಣದ ಹತ್ತಿರ ಹರಿಯುವ ಕಾವೇರಿ ನದಿ ದಂಡೆಯ ಮೇಲಿರುವ ಸ್ಥಳ. ನದಿಯ ದಂಡೆಯ ಎಡಬದಿಯಲ್ಲಿ ವಿಶಾಲವಾದ ಕಟ್ಟೆಯ ಮೇಲೆ ಒಂದು ಬೃಹತ್ ಅರಳೀ ಮರವಿದೆ. ಆ ಮರದ ಸುತ್ತಲೂ ವಿಶಿಷ್ಟ ರೀತಿಯಲ್ಲಿ ನಾಗರ ಕಲ್ಲುಗಳನ್ನು

ಪ್ರತಿಷ್ಠಾಪಿಸಿದ್ದಾರೆ. ಈ ಕೃತಿಯನ್ನು ಪುಟ್ಟಿಯವರು ಜಲವರ್ಣ ಮತ್ತು ತೈಲವರ್ಣ, ಎರಡೂ ಮಾಧ್ಯಮದಲ್ಲಿ ರಚಿಸಿದ್ದಾರೆ. ಇದು ಅವರು ತುಂಬಾ ಇಷ್ಟ ಪಡುವ ಒಂದು ಕಲಾಕೃತಿ. ನಾಗರ ಕಲ್ಲುಗಳಿಗೆ ಧಾರ್ಮಿಕ ಮನೋಭಾವದ ಜನರು ವಿಶೇಷ ಭಂಗಿಗಳಲ್ಲಿ ನಿಂತುಕೊಂಡು ಪೂಜೆ ಸಲ್ಲಿಸುತ್ತಿದ್ದಾರೆ.

ಕಟ್ಟೆ ಹಾಗೂ ಆ ಬೃಹತ್ ಮರದ ಪ್ರತಿಬಿಂಬ ಹರಿಯುವ ನೀರಿನಲ್ಲಿ ನಿಚ್ಚಳವಾಗಿ ಕಾಣುತ್ತಿದ್ದು ಇದು ಕೃತಿಯಲ್ಲಿನ ಪ್ರಮುಖ ಅಂಶವಾಗಿದೆ. ಮತ್ತೊಂದು ಬದಿಯಲ್ಲಿ, ಸ್ನಾನ ಮಾಡುತ್ತಿರುವವರು, ಬಟ್ಟೆ ತೊಳೆಯುತ್ತಿರುವ ಹೆಂಗಸರು, ಮುಂತಾದ ದೃಶ್ಯಗಳನ್ನು ಕಾಣಬಹುದು. ಜಲವರ್ಣದ ಕೃತಿಯು ಉತ್ತಮವಾಗಿ ಮೂಡಿ ಬಂದಿದೆ. ಈ ಕೃತಿಯನ್ನು ೧೯೭೭ ರಲ್ಲಿ ರಚಿಸಿದ್ದಾರೆ.

***ಚಾಮುಂಡಿ ಬೆಟ್ಟದ ತುದಿ:-*** ಇದು ಜಲವರ್ಣದ ಒಂದು ಉತ್ತಮ ಚಿತ್ರ. ೧೯೭೫ ರಲ್ಲಿ ರಚಿಸಿರುವ ಇದು. ಮೈಸೂರಿನ ಪ್ರಸಿದ್ಧ ಚಾಮುಂಡಿ ಬೆಟ್ಟದ ತುದಿಯಲ್ಲಿನ ಒಂದು ದೃಶ್ಯ. ಎರಡು ದಿನಗಳ ಸತತ ಮಳೆಯ ನಂತರ, ತಗ್ಗಾದ ಪ್ರದೇಶಗಳಲ್ಲಿ ನಿಂತ ಮಳೆ ನೀರಿನಲ್ಲಿ ಚಾಮುಂಡಿ ಬೆಟ್ಟದ ಹಿನ್ನಲೆಯ ಪ್ರತಿಬಿಂಬ ಕಾಣುತ್ತಿದ್ದು, ಈ ದೃಶ್ಯವನ್ನು ತುಂಬಾ ಸರಳ ಹಾಗೂ ಸುಂದರವಾಗಿ ರಚಿಸಿದ್ದಾರೆ. ಅತೀ ಕಡಿಮೆ ಕುಂಚದ ಎಳೆತಗಳನ್ನು ಬಳಸಿ, ವಾಶ್ ವಿಧಾನದಲ್ಲಿ ರಚಿಸಿದ್ದಾರೆ. ಚಿತ್ರದಲ್ಲಿನ ಇಳೀ ಬಿಸಿಲು ಆ ಚಿತ್ರಕ್ಕೆ ಹೊಸ ಕಳೆಯನ್ನು ತಂದಿದೆ.

**ಬಂಡೀಪುರದ ರಸ್ತೆಯ ಒಂದು ನೋಟ**

ಇದು ಒಂದು ವಿಶಿಷ್ಟ ಸಂದರ್ಭದಲ್ಲಿ ರಚಿಸಿರುವ ಚಿತ್ರ. ಪುಟ್ಟಿಯವರು ಕೆಲಸದ ನಿಮಿತ್ತ ಒಂದು ಊರಿಗೆ ಹೋಗಿದ್ದಾಗ, ವಾಪಸ್ಸು ಬರಲು ಬಸ್ಸಿಗಾಗಿ ಕಾಯುತ್ತ ನಿಂತಿದ್ದಾಗ, ಬಸ್ಸು ಬರಲು ವಿಳಂಬವಾಗುವುದು ಎಂದು ತಿಳಿದು, ಇದ್ದ ಕೆಲವೇ ಬಣ್ಣದಲ್ಲಿ, ಬಂಡೀಪುರದ ಕಡೆಗೆ ಹೋಗುವ ರಸ್ತೆ ಹಾಗೂ ಅದರ ಹಿನ್ನಲೆಯ ದೃಶ್ಯವನ್ನು ಕೇವಲ ಒಂದು ಗಂಟೆಯಲ್ಲಿ ರಚಿಸಿರುವ ಕೃತಿ ಇದು. ಕುಂಚವನ್ನು ನಿರ್ಭಯವಾಗಿ ಬಳಸಿ ಕಡಿಮೆ ಎಳೆತ ಉಪಯೋಗಿಸಿದ್ದಾರೆ. ಬಣ್ಣಗಳಲ್ಲಿ ಶಾಂತತೆಯಿದೆ, ರಸ್ತೆಯ ಮಗ್ಗುಲಲ್ಲಿ ಕಲ್ಲು ಬಂಡೆಗಳಿವೆ. ಬಂಡೆಗಳ ಹಿಂದೆ ವಿಶಾಲವಾದ, ಎತ್ತರದ ಮರಗಳಿವೆ. ಅವರು ನೆರಳು ನೆಲದ ಮೇಲೆ ಸೂರ್ಯನಿಗೆ ಎದುರಾಗಿ ಬಿದ್ದಿದೆ. ಹಿನ್ನಲೆಯ ಆಕಾಶದಲ್ಲಿ ಮೋಡಗಳ ಗುಂಪು, ಚಿತ್ರದಲ್ಲಿ ದೂರತ್ವದ ಕಲ್ಪನೆಯನ್ನು ನೀಡುತ್ತದೆ. ಮೋಡಗಳಲ್ಲಿ ಬಿಳಿಯ ಭಾಗದಲ್ಲಿ ಹಾಳೆಯನ್ನು ಹಾಗೇ ಉಳಿಸಿಕೊಂಡದ್ದು ಮೆಚ್ಚುವಂತದ್ದು.

***ದೇವಿಕೊಳ:-*** ಇದೊಂದು ವಿಶಿಷ್ಟ ಕೃತಿ. ಮೇಲ್ನೋಟಕ್ಕೆ ಇದು ಪ್ರಾತ್ಯಕ್ಷಿತೆ ನೀಡಿರುವಂತೆ ಭಾಸವಾಗುವುದು. ಇದನ್ನು ೧೯೮೫ ರಲ್ಲಿ ರಚಿಸಿದ್ದಾರೆ. ದೇವಿಕೊಳ ಎಂಬುದು ಹಾಸನದ ಹತ್ತಿರವಿರುವ ಒಂದು ಐತಿಹಾಸಿಕ ಸ್ಥಳ. ಈ ಚಿತ್ರವನ್ನು ನೋಡಿದರೆ, ಅತೀ ಕಡಿಮೆ ಅವಧಿಯಲ್ಲಿ ರಚಿಸಿದ್ದಾರೆ. ಎಂದು ಗೊತ್ತಾಗುವುದು. ಚಿತ್ರದಲ್ಲಿ ಹೆಚ್ಚು ಭಾಗದಲ್ಲಿ ಬಿಳಿ ಹಾಳೆಯನ್ನು ಹಾಗೆಯೇ ಉಳಿಸಿಕೊಂಡು ಅವಶ್ಯಕತೆ ಇರುವೆಡೆಗೆ ಮಾತ್ರ ಬಣ್ಣ ಬಳಿದಿದ್ದಾರೆ. ಕೊಳದ ಸುತ್ತ ಇರುವ ಮನುಷ್ಯಾಕೃತಿಗಳಿಗೆ ಕೇವಲ ಒಂದೇ ಬಳೆತ ಬಳಿಯಲಾಗಿದೆ. ಇದರಲ್ಲಿ ಕಲಾವಿದರ ಅನುಭವ ಹಾಗೂ ಅವರು ಬಣ್ಣದ ಮೇಲೆ ಹೊಂದಿರುವ ಹಿಡಿತವನ್ನು ಕಾಣಬಹುದು.



ನಂಜನಗೂಡು ರಸ್ತೆಯಲ್ಲಿನ ಒಂದು ದೇವಸ್ಥಾನ / A Temple on Nanjanagudu Road

### ಜೈಪುರದಲ್ಲಿನ ಹೋಟೆಲ ದೃಶ್ಯ

೧೯೭೮ರಲ್ಲಿ ರಚಿಸಿರುವ ಜಲವರ್ಣದ ಕೃತಿ. ಪುಟ್ಟಿಯವರ ಕೃತಿಗಳಲ್ಲಿನ ಒಂದು ಉತ್ತಮ ಚಿತ್ರ. ಜೈಪುರದಲ್ಲಿನಲ್ಲಿದ್ದ ತಮ್ಮ ಮಗನನ್ನು ಕಾಣಲು ಹೋಗಿದ್ದಾಗ, ಈ ದೃಶ್ಯ ಅವರಿಗೆ ತುಂಬ ಇಷ್ಟವಾಗಿ ರಚಿಸಿದ್ದಾರೆ. ಇದೊಂದು ಜೈಪುರದ ಪ್ರಸಿದ್ಧ ಸ್ಥಳ ಹಾಗೂ ಪ್ರವಾಸಿಗರ ಆಕರ್ಷಕ ಸ್ಥಳ.

ವಿಶಾಲವಾದ ಸರೋವರದ ಮಧ್ಯದಲ್ಲಿ ಸ್ಥಾಪಿಸಲಾಗಿರುವ ಒಂದು ಕಟ್ಟಡ. ಹಾಗೂ ಅದರ ಹಿನ್ನಲೆ, ಕೆಳಗಡೆ ಸರೋವರದ ನೀರಿನಲ್ಲಿ ಅಸ್ಪಷ್ಟವಾಗಿ ಕಾಣುತ್ತಿರುವ ಪ್ರತಿಬಿಂಬವನ್ನು ತೋರಿಸಲು ತುಂಬಾ ಶ್ರಮ ಪಟ್ಟಿದ್ದಾರೆ. ಚಿತ್ರ ನೋಡಲು, ಸರಳವಾಗಿದ್ದರೂ, ನಿರೂಪಣೆಯ ದೃಷ್ಟಿಯಿಂದ ಮಾರ್ಮಿಕವಾಗಿದೆ. ನೀರಿನ ತೆರೆಗಳ ಚಲನೆಯಿಂದ ಪ್ರತಿಬಿಂಬ ಇನ್ನಷ್ಟು ಸುಂದರವಾಗಿದೆ. ಹಿನ್ನಲೆಯಲ್ಲಿರುವ ಬೆಟ್ಟದ ದೃಶ್ಯ ಇದಕ್ಕೆ ಪೂರಕವಾಗಿ ಸೌಂದರ್ಯವನ್ನು ಹೆಚ್ಚಿಸಿದೆ.

### ಮೂಡಿಗೆರೆ ಕಾಫೀ ತೋಟದ ದೃಶ್ಯ

ಪುಟ್ಟೀಯವರು ಇದುವರೆಗೂ ರಚಿಸಿರುವ ನಿಸರ್ಗ ಚಿತ್ರಗಳಲ್ಲಿ ಇದು ಅತ್ಯುತ್ತಮವಾದದ್ದು ಎಂದು ಹೇಳಬಹುದು. ೧೯೭೭ರಲ್ಲಿ ರಚಿಸಿರುವ ಇದು. ಮೂಡಿಗೆರೆಯಲ್ಲಿನ ಒಂದು ಕಾಫೀ ತೋಟದ ಎತ್ತರವಾದ ಪ್ರದೇಶ. ಕಣ್ಣಿನ ದೃಷ್ಟಿಗೆ ಬಹಳಷ್ಟು ಎತ್ತರದಲ್ಲಿ ಕಾಣುವ ಈ ದೃಶ್ಯ, ಯಥಾದರ್ಶನದ ನಿರೂಪಣೆಗೆ ಒಂದು ಉತ್ತಮ ಉದಾಹರಣೆ ಎನ್ನಬಹುದು. ಎತ್ತರವಾದ ದಿಬ್ಬದ ಮೇಲೆ ಕೆಂಪು ಹಂಚಿನ ಮನೆ, ಹಿನ್ನಲೆಯಲ್ಲಿ ಎತ್ತರವಾದ ಸಾಗವಾಣಿ ಮರಗಳ ಗುಂಪು, ಮರಗಳ ಹಿಂದೆ ಶುಭ್ರವಾದ ಆಕಾಶ, ಆಕಾಶದ ಅವಕಾಶದಲ್ಲಿ ಬಿಳಿ ಹಾಳೆಯನ್ನು ಹೆಚ್ಚಾಗಿ ಉಳಿಸಿಕೊಂಡು, ಬಣ್ಣ ಬಳಿದಿರುವುದು ಮತ್ತು ಇಳಿಜಾರಾದ ಮಣ್ಣಿನ ಕಾಲುದಾರಿ, ಪಕ್ಕದ ಹಸಿರು ನೆಲ ಹಾಗೂ ಮುಖ್ಯವಾಗಿ ಕೃತಿಯ ಪ್ರಾರಂಭದಲ್ಲಿ ಒಂದು ದೊಡ್ಡ ಮರವನ್ನು ಚಿತ್ರಿಸಿದ್ದು ನೋಡುಗರಿಗೆ

ಸಂತೋಷವನ್ನು ನೀಡುತ್ತದೆ. ಜಲವರ್ಣದ ಬಳಕೆಯಲ್ಲಿ ಕಲಾವಿದರು ಸಾಕಷ್ಟು ಪರಿಪೂರ್ಣತೆಯನ್ನು ಹೊಂದಿರುವುದು ಕಂಡು ಬರುವುದು.

***ರೂಪ ಸಜ್ಜಾ:-*** ಪುಟ್ಟಿಯವರು ಹೆಚ್ಚಾಗಿ ನಿಸರ್ಗ ಚಿತ್ರಗಳನ್ನು ರಚಿಸಿದ್ದರೂ ಅವರು ರಚಿಸಿರುವ ಕೆಲವೇ ಸಂಯೋಜನೆ ಚಿತ್ರಗಳಲ್ಲಿ, ಇದು ಪ್ರಮುಖವಾದದ್ದು, ಹೆಚ್ಚಾಗಿ ಅಲಂಕಾರಿಕ ಶೈಲಿಯನ್ನೇ ಒಳಗೊಂಡಿರುವ ಇದು, ಚಿತ್ರಗದಲ್ಲಿ ಬರುವ ವ್ಯಕ್ತಿಗಳ ಸಂಯೋಜನೆ ವಿಶಿಷ್ಟವಾಗಿದೆ. ಸುಮಾರು ೨೫ ಮನುಷ್ಯಾಕೃತಿಗಳನ್ನು ಒಳಗೊಂಡಿರುವ ಈ ಚಿತ್ರದಲ್ಲಿ, ಪ್ರತಿಯೊಂದು ಮನುಷ್ಯಾಕೃತಿಯು ಬೇರೆ ಭಂಗಿ, ಭಾವಗಳನ್ನು ಹೊಂದಿದ್ದು, ಕಲಾವಿದನ ಸಂಯೋಜನೆಯ ಅನುಭವವನ್ನು ಎತ್ತಿ ತೋರಿಸುತ್ತದೆ.

**'ಸೀತೆ'** ಯನ್ನು ಶೃಂಗಾರಗೊಳಿಸುತ್ತಿರುವ ಈ ದೃಶ್ಯದಲ್ಲಿ ಒಳಾಂಗಣ ತುಂಬಾ ಅಲಂಕಾರಿಕವಾಗಿ ಸಜ್ಜುಗೊಂಡಿದೆ. ಮೇಲ್ನೋಟಕ್ಕೆ ಅಂತಃಪುರದ ಒಂದು ಸಾಮಾನ್ಯ ದೃಶ್ಯವಾಗಿದ್ದರೂ, ಒಂದು ಉತ್ತಮ ಕೃತಿ ಎನ್ನಲು ಸಂಶಯವಿಲ್ಲ.

***ಸರಸ್ವತಿ:-*** ಸಾಗರದ ಅಲೆಗಳ ಮೇಲೆ ಸರಸ್ವತಿಯು ತನ್ನ ವಾಹನದ ಹಂಸ ಪಕ್ಷಿಯ ಮೇಲೆ ಕುಳಿತು ಸಾಗುತ್ತಿರುವ ಒಂದು ದೃಶ್ಯ ಇದು, ನೀಳವಾದ ಹಾಗೂ ದೊಡ್ಡ ಗಾತ್ರದ ವೀಣೆಯನ್ನು ಕೈಯಲ್ಲಿ ಹಿಡಿದಿರುವ ಸರಸ್ವತಿಯು, ಮತ್ತೊಂದು ಕೈಯಿಂದ ವೀಣೆ ನುಡಿಸುತ್ತಿದ್ದಾಳೆ. ಇನ್ನುಳಿದ ಎರಡು ಕೈಗಳಲ್ಲಿ ಜಪಮಾಲೆ ಹಾಗೂ ತಾಳೆಗರಿಯನ್ನು ಹಿಡಿದುಕೊಂಡಿದ್ದು, ವಿಶಿಷ್ಟವಾಗಿ ಸಂಯೋಜಿಸಲಾಗಿದೆ. ಬಂಗಾಳೀ ಕಲಾವಿದರ ವಾಷ್ ವಿಧಾನವನ್ನು ಒಳಗೊಂಡಿರುವ ಈ ಚಿತ್ರ, ಸೂಕ್ಷ್ಮ ರೇಖೆಗಳಿಂದ ಗಮನ ಸೆಳೆಯುತ್ತದೆ. ಅತೀ ಕಡಿಮೆ ಬಣ್ಣವನ್ನು ಬಳಸಲಾಗಿದ್ದು, ನವಿರಾದ ಅಲಂಕಾರ ಎದ್ದು ಕಾಣುತ್ತದೆ. ಇದು ಕಲಾವಿದರ ಕುಶಲತೆಯನ್ನು ತೋರಿಸುವ ಒಂದು ಉತ್ತಮ ಚಿತ್ರ.

## ಹಾರ್ನಳ್ಳಿ ಸೋಮನಾಥೇಶ್ವರ ದೇವಾಲಯ

ಪುಟ್ಟಿಯವರು ಸಾಕಷ್ಟು ಪಾಳು ದೇಗುಲಗಳನ್ನು ಬರೆದಿರುವುದನ್ನು ನಾವು ಗಮನಿಸಬಹುದು. ಅವರು ರಚಿಸಿರುವ ಪುರಾತನ ದೇವಾಲಯಗಳ ಚಿತ್ರ ಸರಣಿಯಲ್ಲಿ, ಇದೊಂದು ಉತ್ತಮ ಚಿತ್ರಕೃತಿ, ಹೊಯ್ಸಳ ಶೈಲಿಯಲ್ಲಿ ನಿರ್ಮಿಸಲಾಗಿದ್ದ ಈ ದೇವಾಲಯವನ್ನು ಬರೆಯುವುದು, ಯಾರಿಗೇ ಆದರೂ ಕಷ್ಟದ ಕೆಲಸ ಎನ್ನಬಹುದು, 'ಸೋಮನಾಥಪುರದ' ದೇವಾಲಯದ ಯಥಾರೂಪವನ್ನು ಹೊಂದಿರುವ ಈ ದೇವಾಲಯಗಳು, ಅಲಂಕಾರ ಹಾಗೂ ಕುಸುರಿ ಕೆಲಸಗಳಿಗೆ ಹೆಸರುವಾಸಿ, ಸೂಕ್ಷತೆಯೇ ಪ್ರಧಾನ ಅಂಶವಿರುವ ಈ ದೇಗುಲವನ್ನು ಶ್ರೀಯುತರು ತುಂಬಾ ಮಾರ್ಮಿಕವಾಗಿ, ಸರಳವಾಗಿ, ಕಡಿಮೆ ಬಣ್ಣವನ್ನು ಉಪಯೋಗಿಸಿ ಸುಂದರವಾಗಿ ತೋರುವಂತೆ ಚಿತ್ರಿಸಿದ್ದಾರೆ. ಸ್ಪಷ್ಟವಾದ ನೆರಳು ಬೆಳಕು. ಸೂಕ್ತವಾದ ಸ್ಥಳಾವಕಾಶವನ್ನು ಬಳಸಿ, ಒಂದು ಉತ್ತಮ ಕಲೆಯನ್ನಾಗಿ ರೂಪಿಸಿದ್ದಾರೆ.

### ಮರದ ದೇವಾಲಯ

ಈ ದೇವಸ್ಥಾನವನ್ನು ನೋಡಿದರೆ, ಬೇರೆ ದೇವಾಲಯಗಳಿಗಿಂತ ಭಿನ್ನವಾಗಿ ಕಂಡು ಬರುವುದು,

